ಕೊರವಂಜಿ

KURAVANJI
Kannada Monthl[illegible]

ಸಂಪಾದಕರು :
ಶ್ರೀ ರಾ. ಶಿ

★

ಸಹಕಾರಿಗಳು :

[illegible]



ಆಗಸ್ಟ್
೧೯೬೫

[illegible]ನಗೆಯ ಮಾಸಪತ್ರಿಕೆ

೨೫ ಪೈಸೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, August 1965

ಕೊರವಂಜಿ

A. ANANTHIAH.

ಸಂಪುಟ ೨೫]   ಆಗಸ್ಟ್ ೧೯೬೫   [ಸಂಚಿಕೆ ೫

ಕುಹಕಿಡಿಗಳು

ಲಾಲ್‌ಬಾಗಿನ ಗಾಜಿನ ಮನೆಯ ಆಜೂ ಬಾಜೂ ಇರುವ ಸಣ್ಣ ಪುಟ್ಟ ಕಲ್ಲುಗಳನ್ನೆಲ್ಲಾ ತೆಗೆದು ಶುದ್ಧೀಕರಣ ಮಾಡಿದ್ದಾರಂತೆ.

—ಮುಂಜಾಗ್ರತಾ ಕ್ರಮ!!

*   *   *   *

ಶ್ರೀ ಕೆಂಗಲ್ ಹನುಮಂತಯ್ಯನವರ ಭಾಷಣ ಕೇಳಿ ಮಹಾರಾಷ್ಟ್ರೀಯರು ಸಿಟ್ಟಿಗೆದ್ದರಂತೆ.

—ನ್ಯಾಯವೇ? ಕಂಡದ್ದು ಹೇಳಿದರೆ ಕೆಂಡದಂಥಾ ಕೋಪ!

*   *   *   *

ಮಧ್ಯಾಹ್ನ ೧೨ ಗಂಟೆಯಿಂದ ಸಂಜೆ ನಾಲ್ಕರತನಕ, ವಿಮಾನ ನಿಲ್ದಾಣದಲ್ಲಿ ಸಚಿವರುಗಳು ಕಾಂಗ್ರೆಸ್ ಅಧ್ಯಕ್ಷರನ್ನು ಸ್ವಾಗತಿಸಲು ಮೂರು ನಾಲ್ಕು ಬಾರಿ ತೋಳ ಬಂತು ತೋಳ ಕತೆಯ ತರಹ ಓಡೋಡಿ ಹೋದರಂತೆ,

—ಕಡೆಗೆ ದಿಟವಾಗಲೂ ಬಂದಿಳಿದಾಗ, ಎಲ್ಲರೂ ನಿಲ್ದಾಣದಲ್ಲೇ ಹಾರ ಹಿಡಿದುಕೊಂಡು ನಿಂತೇ ಇದ್ದರಂತೆ—ತೋಳನ ಕತೇನೇ!

*   *   *   *

ಹಳೆ ಪದ್ಯಗಳಿಗೆ ಹೊಸ ಜೀವ ಬಂದಿದೆಯಂತೆ:—

ಭರತ ಖಂಡದ ಮಧ್ಯದೊಳಗೆ
ಕೊರಗುತಿಹ ಕರ್ಣಾಟ ದೇಶದ
ಜನರ ಬಾಯಿಗೆ ಮೊಸರಬಳಿದು
ಲೂಟಿ ಹೊಡೆದರು ಇತರರು.

ಕಪ್ಪು ಧ್ವಜ ಪ್ರದರ್ಶನವನ್ನು ಯಾಕಯ್ಯಾ ಮಾಡಿದೆ ? ಎಂದು ಕಾಲೇಜು ಹುಡುಗನನ್ನು ಕೇಳಿದಾಗ—

—ಕಪ್ಪು ಹಣದಿಂದ ನಡೆಯೋ ಉತ್ಸವಕ್ಕೆ ಕಪ್ಪು ಧ್ವಜ ಒಪ್ಪಲ್ಲವೇ ಅಂದುಬಿಡೋದೇ !

*   *   *   *

ಬೆಂಗಳೂರಿನಲ್ಲಿ ನಡೆದ ಎ. ಐ. ಸಿ. ಸಿ. ಸಭೆಗೆ ಬಂದಿದ್ದ ರಾಷ್ಟ್ರದ ಹಿರಿಯ ನಾಯಕರನ್ನು, "ನಿಮ್ಮ ಹಸ್ತಾಕ್ಷರ ದಯಪಾಲಿಸಿ" ಎಂದು ಯಾವ ಹುಡುಗರೂ ಕೇಳಲಿಲ್ಲವೆಂಬುದು ಖಚಿತವಲ್ಲವಂತೆ.

*   *   *   *

ಐದು ನಕ್ಷತ್ರದ ಅನುಕೂಲವಾದ ಹೋಟಲೊಂದನ್ನು ಎರಡು ಕೋಟಿ ರೂಪಾಯಿಗಳ ಖರ್ಚಿನಲ್ಲಿ ಸ್ಥಾಪಿಸಬೇಕೆಂದು, ಹಲನಾರು ಹೋಟಲು ಮಾಲೀಕರು ಯೋಜನೆ ಹೂಡಿದ್ದಾರಂತೆ.

—ಯಾಕೆ ? ತಮ್ಮ ತಮ್ಮ ಹೋಟಲಿನಲ್ಲಿ ಊಟ ಮಾಡುಕ್ಕೆ ಅವರಿಗೆ ಬೇಸರವೇ ?

*   *   *   *

ಕಾಂಗ್ರೆಸಿನ "ಶುಂಠಿ" ಪಂಗಡದವರು, ಒಳಗೊಳಗೇ ಒಬ್ಬರಿಗೊಬ್ಬರು ಒಳಶುಂಠಿ ಕೊಡುತ್ತಿದ್ದಾರಂತೆ !

*   *   *   *

ನಮ್ಮೂರಿನಲ್ಲಿ ಮಗುವು ಅಳುತ್ತಿದ್ದಾಗ, ಅಳುವನ್ನು ಟೇಪ್ ರೆಕಾರ್ಡ್ ಮಾಡಿ ಅಮೆರಿಕಾ ಸಂಶೋಧನಾಲಯಕ್ಕೆ ಕಳಿಸಿದರಂತೆ.

—ಚೋಟಿ ಮಗು ! ಬೆಳೆದು ಸಂಪಾದಿಸಿದ ಮೇಲೆ ಹಿರಿಯರು ಮಾಡಿದ ಅಮೆರಿಕಾ ಸಾಲವನ್ನು ತೀರಿಸಬೇಕಾಗುತ್ತೆ, ಎಂದು ಗೊತ್ತಾಗಿಯೇ ಹಾಗೆ ಅತ್ತಿರ ಬೇಕು ಎಂದು ಸಂಶೋಧಕರು ಪತ್ತೆ ಹಚ್ಚಿದ್ದಾರೆಂಬುದು ಖಚಿತವಲ್ಲವಂತೆ.

*   *   *   *

ಒದ್ದೆಯಾಗುಲ್ಲ ಎಂಬ ಭರವಸೆಯಿಂದ ಗಂಬ್ಳಾಲೆಯಲ್ಲಿ ಪ್ಲಾಸ್ಟಿಕ್ ಪಂಚೆ ಗಳನ್ನು ಉಡುಕ್ಕೆ ಶುರು ಮಾಡಿದ್ದಾರೆಂಬುದು ಶುದ್ಧ ಸುಳ್ಳಂತೆ.

*   *   *   *

ಪಾಕೀಸ್ಥಾನವು ನಮ್ಮಿಂದ ಅಂದದ ಬೂದಿಯನ್ನು ಆಮದುಮಾಡಿಕೊಳ್ಳುತ್ತ ದೆಂದು ಸುದ್ದಿ.

—ನಮ್ಮ ಬೂದೀನ ಕೊಂಡು, ನಮ್ಮ ಕಣ್ಣಿಗೇ ಎರಚುಕ್ಕೆ ಇದು ಸೂಚನೆಯೋ

*   *   *   *

ಶ್ರೀಮಾನ್ ನಿಜಲಿಂಗಪ್ಪನವರು ವರ್ಣಚಿತ್ರ ಬಿಡಿಸುವುದನ್ನು ಅಭ್ಯಾಸಮಾಡು ತ್ತಿದ್ದರಂತೆ—ದೇಶಸೇವೆಯ ನಿಮಿತ್ತ ತಮ್ಮ ಅಭ್ಯಾಸಕ್ಕೆ ತುಂಡು ಹಾಕಿದರಂತೆ.

—ನಿಜವಾದ ದೇಶಸೇವೆ ! ! ಈ ತ್ಯಾಗ.

*　　*　　*　　*

ಹೊಸ ರುಮಾಲು ಸುತ್ತಿಕೊಂಡರೆ, ಅದರಮೇಲೆ ಗಮನವಿರುತ್ತೆ. ಎಲ್ಲಿ ಬಾಲ ಬಿಟ್ಟಿಕೊಳ್ಳುತ್ತೋ ಅಂತ, ಎಂದೊಬ್ಬರು ಅಂಬೋಣ.

—ದಿಟ ಇರಬೇಕು ! ಅದಕ್ಕೇ ಮದುವೆ ಗಂಡಿಗೆ ಅಂತಹ ರುಮಾಲನ್ನೇ ಕಟ್ಟುತ್ತಾರೆ. ಗಂಡಿನ ಗಮನ ಎಲ್ಲಾ ರುಮಾಲ ಮೇಲೆ ಇರಲಿ ಅಂತ.

*　　*　　*　　*

ವಿಲಾಯಿತಿಗೆ ಹೋಗಿ ಬಂದ ಕುಸ್ತಿ ವಸ್ತಾದರು, ಭಾರತದ ಕುಸ್ತಿ ಆಟಕ್ಕೆ ಕೆಮ್ಮಣ್ಣು ತೂರಿ ಮಟ್ಟ ಮಾಡಿದರು, ಎನ್ನಬಹುದು.

*　　*　　*　　*

ಬೋನಸ್ ಎಂದರೆ ಮುಂದುಹಾಕಲ್ಪಟ್ಟ ಕೂಲಿ ಅಲ್ಲ. ಎಂದು ಮೂಲ ವಿವರಣೆ ಮತ್ತು ಅರ್ಥ.

—ಘನ ಸರ್ಕಾರದವರು ಕಡ್ಡಾಯವಾಗಿ ಶೇಕಡಾ ೩ ರಷ್ಟಾದರೂ ಬೋನಸ್ ಕೊಡಲೇಬೇಕು ಎಂದು ಹುಕುಂ ಹೊರಡಿಸಿದ್ದಾರೆ,

—ಟೀಕೆ ಅನಗತ್ಯ.

*　　*　　*　　*

ಯಾವುದೊಂದು ವ್ಯಕ್ತಿಯನ್ನಾಗಲೀ ಯಾವುದೊಂದು, ಪಂಗಡ, ಮತ, ಪಕ್ಷ, ಜನಾಂಗವನ್ನಾಗಲೀ ಬೊಟ್ಟುಮಾಡಿ ತೋರಿಸಿ ಅಪಹಾಸ್ಯ ಮಾಡುವ ಕೀಳುತನವನ್ನು ಕೊರವಂಜಿಯು ಸ್ಥಾಪಿತವಾದಂದಿನಿಂದ ಎಂದೂ ತೋರಿಸಿಕೊಂಡಿಲ್ಲ. ಅಪಹಾಸ್ಯವು ಕೀಳು, ನೈಜಹಾಸ್ಯವು ತಿಳಿಯಾದ ಹಾಸ್ಯ. ಅದೇ ಉದ್ಧರಿಸುವ ಕ್ರಮ ಎಂದು ಕೊರವಂಜಿಯು ಸಾರುತ್ತಲಿದ್ದಾಳೆ.

ಹೀಗಿದ್ದರೂ ಕಳೆದ ತಿಂಗಳ ಕೊರವಂಜಿಯ ಲೇಖನವೊಂದು ಕೆಲವು ಮಿತ್ರರಿಗೆ ಅಸಮಾಧಾನವನ್ನುಂಟುಮಾಡಿತ್ತೆಂದು ತಿಳಿಯಬಂದಿದೆ. ಆ ಮಿತ್ರರು ಇನ್ನೊಮ್ಮೆ ಲೇಖನವನ್ನು ತೆರೆದ ಮನಸ್ಸಿನಿಂದ ಓದಲಿ ಎಂದು ವಿನಯ ಪೂರ್ವಕ ವಿಜ್ಞಾಪಿಸಿ ಕೊಳ್ಳುತ್ತೇವೆ. ಕನ್ನಡ ಚೆನ್ನಾಗಿ ತಿಳಿಯದೆ ಇದ್ದರೆ. ತಿಳಿದವರಿಂದ ಓದಿಸಿ ಅರ್ಥ ಮಾಡಿಕೊಳ್ಳಲಿ ಎಂದು ಕೇಳಿಕೊಳ್ಳುತ್ತೇವೆ.

ತಟವಟ, ಮೋಸ, ಅಜ್ಞಾನ, ದಗಲಬಾಜಿತನಗಳು ಎಲ್ಲಿ ಕಂಡರೂ ಅವನ್ನು ನಗಿನಗಿಸುತ್ತಾ ಬಹಿರಂಗ ಪಡಿಸುವುದೇ ಕೊರವಂಜಿಯ ಧ್ಯೇಯ. ಇಂತಹ ಸಮಾಜ ಘಾತುಕ ಚಟುವಟಿಕೆಗಳ ಮೇಲೆ ತುಸು ಉತ್ಪ್ರೇಕ್ಷೆಯ ಬೆಳಕು ಚೆಲ್ಲುವುದೇ ಕೊರವಂಜಿಯ ಗುರಿ, ಬೇರೆ ಯಾವ ಗುರಿಯೂ ಇಲ್ಲವೆಂದು ಕೊರವಂಜಿಯು ನಮ್ರಳಾಗಿ ಭಿನ್ನವಿಸಿಕೊಳ್ಳುತ್ತಾಳೆ,

ಆರತಿ ಆಟೋಮೊಬೈಲ್ಸ್

ಮುಗಿಲುಹಳ್ಳಿಯ ಮುಖ್ಯ ಬೀದಿಯಲ್ಲಿರುವ " ಡಿಲೈಟ್ ಆಫ್ ಡಾರೆಸ್ಸಲಾಂ" (ಕೂದಲು ಕತ್ತರಿಸುವ ಅಂಗಡಿ) ಅಲಂಕಾರ್ ಸ್ಟೋರ್ಸ್ (ಇಲ್ಲಿ ಅಚ್ಚ ಹರಳೆಣ್ಣೆ ದೊರೆಯುತ್ತೆ) ಪ್ರೆಸ್ ಜಾಂಬೆಜಿ (ಇಲ್ಲಿ ಅಂದವಾದ ಲಗ್ನಪತ್ರಿಕೆಗಳನ್ನು ಅಗ್ಗದರದಲ್ಲಿ ಮುದ್ರಿಸಲ್ಪಡುತ್ತೆ) ಮೊದಲಾದ ಅಂಗಡಿ ಮುಗ್ಗಟ್ಟುಗಳ ಸಾಲಿನಲ್ಲಿ " ಆರತಿ ಆಟೋ ಮೊಬೈಲ್ಸ್ " ಇರುವುದೆಂದು ಭಾವಿಸಿ ಹುಡುಕಬೇಡಿ. ಅದು ಅಲ್ಲಿಲ್ಲ " ಆರತಿ ಆಟೋ ಮೊಬೈಲ್ಸ್ " ಇಷ್ಟರಲ್ಲೇ ಅಲ್ಲದಿದ್ದರೂ ಅನೇಕ ತಿಂಗಳುಗಳು ಕಳೆದನಂತರ ಮುಗಿಲು ಹಳ್ಳಿಯಲ್ಲಿ ರಾರಾಜಿಸಲಿರುವ ಬೃಹತ್ ಸಂಸ್ಥೆ.

ಈಗಾಗಲೇ ಮುಗಿಲುಹಳ್ಳಿಯಲ್ಲಿರುವ " ಇಂಟರ್ ನ್ಯಾಷನಲ್ ಗ್ಯಾರೇಜ್ " " ಯರಗುಂಟೆ ಎಂಟರ್ ಪ್ರೈಸಸ್ (ಪ್ರೈವೇಟ್) ಲಿಮಿಟೆಡ್ " " ಶಕಟ ಗ್ಯಾರೇಜ್ " ಇವುಗಳಿಗೆಲ್ಲಾ ಏನು ಶನಿ ಬಡಿದಿದೆ ? ಅವೆಲ್ಲಾ ಇದ್ದರೂ ಈ " ಆರತಿ " ಹೇಗೆ ಊರ್ಜಿತ ಹೊಂದಲು ಸಾಧ್ಯ ! ಎಂದು ಮುಂತಾಗಿ ಕೇಳಬೇಡಿ.

ಇದಕ್ಕೆಲ್ಲಾ ದೇಶದಲ್ಲಿರುವ " ಎಮರ್ಜನ್ಸಿ "ಯೇ ಮೂಲಕಾರಣ. ಎಮರ್ಜೆನ್ಸಿ ಬರುವವರೆಗೆ ನಮ್ಮ ಊರು " ಲಾರಿ ಗಾಡಿ " ಯುಗದಲ್ಲೇ ಇತ್ತು ; ಏಕ್‌ದಂ " ಅಂಬ್ಯಾಸಡರ್ ! " ಯುಗಕ್ಕೆ ಕಾಲಿಟ್ಟಿದೆ. ಲ್ಯಾಂಬ್ರೆಟಾ. ಟೆಂಪೊ, ಡಾಜೆ, " ಟಿ. ಎಂ. ಬಿ. "ಗಳ ಜೊತೆಗೆ ಫಿಯಟ್, ಸ್ಟ್ಯಾಂಡರ್ಡ್ ಮತ್ತು ಅಂಬ್ಯಾಸಡರ್‌ಗಳು ಸೇರಿ ಈಗಲೀಗ ಮುಗಿಲು ಹಳ್ಳಿಯಲ್ಲಿ ನಡುರಸ್ತೆಯ ವಿನಃ ಇನ್ನೆಲ್ಲೂ ಸುರಕ್ಷಿತವಾದ ಜಾಗ ಓಡಾಡಲು ದೊರೆಯುವುದಿಲ್ಲ.

ಆದುದರಿಂದ ನಾನು ಯಥಾಪ್ರಕಾರ ನಡುರಸ್ತೆಯಲ್ಲಿ ಹೊರಟಿದ್ದೆ. ಬಿಸಿಲಿನ ಝಳಕ್ಕೆ ಟಾರು ಕುದಿಯುತ್ತಿತ್ತು. ಜನಜಂಗುಳಿ ಕಡಿಮೆಯಾಗಿತ್ತು. ಅದೇಕೋ ಏನೋ ಯಾವ ಸ್ವಚಲಿತ ರಥವೂ ರಸ್ತೆಯಲ್ಲಿ ಕಾಣುತ್ತಿರಲಿಲ್ಲ.

ನನ್ನ ಹಿಂದೆ ಸ್ಕೂಟರಿನ ಗುಟುರು ಕೇಳಿತು. ಹಾರನ್ ಆಯ್ತು. ಮರುಕ್ಷಣ ದಲ್ಲಿ ನಾನು ಕೆಳಕ್ಕುರುಳಿದೆ. ಅಕ್ಕಪಕ್ಕದ ಅಂಗಡಿಗಳಲ್ಲಿ ಜನ ಕೂಗಿದರು. ಸುತ್ತಲೂ ಸಣ್ಣದೊಂದು ಗುಂಪು ಸೇರಿತು. ನಾನು ರಕ್ತದ ಹೊನಲನ್ನು ಕಾಣಲು ಆಚೀಚೆಗೆ ಹೊರಳಿದೆ.

“ ಯೋನಜಾ ” ಎಂದ ಸ್ಕೂಟರಾರೋಹಿಯೊಬ್ಬ,

“ ಏನ್ಲೇ ದಂಬ್ಬೇರ್ದಾ ! ” ಎಂದೆ ನಾನು.

ವೀರಣ್ಣ ನನ್ನ ಕೈಹಿಡಿದು ಮೇಲಕ್ಕೆತ್ತಿದ.

“ ಸ್ಕೂಟರ್ ಡ್ಯಾಷ್ ಹೊಡದ್ರೂ ಸಾಯ್ಲಿಲ್ಲಜಾ ನೀನು. ಬಲು ಗಟ್ಟಿ ಕಣಲೇ ರಾಯಾ ನೀನು ! ಏನ್ಮಾಡಿ ಕಟ್ಟೆ ಕಡ್ಡಿಡು ಕೂ ಅಂತದಿಯಂಲೇ ” ಎಂದ,

ನಾನು “ ಎಲೋ ಮಿತ್ರದ್ರೋಹೀ. ಎಷ್ಟು ದಿನದಿಂದ ಕಲ್ಮಷವನ್ನು ಹೊಟ್ಟೆಯಲ್ಲಿ ತುಂಬಿಕೊಂಡಿದ್ದೆ. ಈ ದಿನವಾದರೂ ಅದು ಹೊರಬಿತ್ತಲ್ಲ. ಇರಲಿ ! ” ಎಂದೆ.

ವೀರಣ್ಣ “ ಅದೊಂದು ಟ್ರಿಕ್ ಕಣಜ್ಜಾ ” ಎಂದ.

ನಾನು “ ಎಂಥ ಟ್ರಿಕ್ಕಲೇ ? ಚೌ ಎನ್ ಲೈ ಟ್ರಿಕ್ಕೋ, ಸುಕರ್ನೋ ಟ್ರಿಕ್ಕೋ ? ” ಎಂದೆ.

“ ಎತ್ಲಗ್ಹಾಳಾಗ್ಹೋಗಿದ್ದೆಲೇ ರಾಯ ? ಬಲ್ಹುಡ್ಕಿದೆ ಕಣೋ.”

“ ಡ್ಯಾಷ್ ಹೊಡ್ಸಿ ಕೊಲ್ಲಣಾ ಅಂತಲೇ. “

“ ಅಲ್ಲಪಾ. ಪರೀಕ್ಷೆ ಕಟ್ಟಣ ಅಂತ. ”

“ ಪಾಸಾತಲ್ಲೊ ನಿಂದು. ”

“ ಇಂಗ್ಲೀಸೊಂದು ಪಾಸಾತು. ಉಳ್ದದ್ದು ? ”

“ ನಿಧಾನಕ್ಕಾಗ್ಲೀಳು. ಏನು ಕೊಳ್ಳೇ ಹೋತು. ”

“ ಹಂಗಲ್ಲಪಾ. ಆಲೇ ವಯಸ್ಸಾಗ್ತಾ ಬಂತು. ಇನ್ನು ನಾಳೇ ಕೆಲ್ಸ ಗಿಲ್ಸ ಮಾಡಕ್ಕೆ,”

“ ಇದಕ್ಕಿಂತ ಇನ್ನೆಂಥ ಕೆಲ್ಸನೋ ? ಸಕ್ರೆ ಕೊಡಸ್ತಿನಿ ಅಂತ ತಿಂಗಳಿಗೆ ಐವತ್ತು ಜನದ್ಹತ್ರ ಐದೈದು ರೂಪಾಯಿ ಇಸ್ಗಂಡು, ಅವರ್ನೆಲ್ಲಾ ಸ್ಕೂಟರ್ ಕೆಳ್ಗೆ ಬೀಳ್ಸಿ ಕಾಲೋ, ತಲೇನೋ ಮುರಿಯ ಕೆಲ್ಸಕ್ಕಿಂತ ಘನವಾದ ಕೆಲ್ಸ ಇನ್ನೆಲ್ಲೈತೆ.”

ವೀರಣ್ಣ ರೇಗಿದ. “ ಏನಯ್ಯಾ ! ನಾನು ಅಂಥ ನಾಮರ್ಧ ಅಂತ ತಿಳಿದ್ಯಾ. ನೀನು ಊರಿಗೇ ಬರಲ್ಲ. ಬಂದ್ರೆ ಸಿಗಲ್ಲ. ಅದಕ್ಕೆ ನಿನ್ನ ಕಾಲಿಗೆ ಸ್ವಲ್ಪ ಗಾಯ ಆದ್ರೆ ಒಂದಿವ್ಸ ಇಲ್ಲೇ ಉಳ್ಕಂತಿ ಅಂತ ಒಂದು ಟ್ರಿಕ್ ಮಾಡಿದೆ ಅಷ್ಟೇ. ನಾನು ನಿನ್ನಂಥರ್ನ ಕಳ್ಕಂಡ್ರೆ ಉಳ್ದೀನೇನಯ್ಯ, ನಾನು ಕೈ ಕೊಡೋದು ಬ್ಯಾರೆ ಜನಕ್ಕೆ ” ಎಂದ.

ನಾನು “ ಅಲ್ಹೋ ವಾರಕ್ಹೊರ್ದಿನ ಇಲ್ಲೇ ಇರ್ತಿನಿ. ಈ ಊರಿಗೆ ಬರಲ್ಲ ಅಂತಿಯಲ್ಹೋ, ನೀನೇ ಸಿಗಲ್ಲ ಕಣ್ಲೇ,”

ವೀರಣ್ಣ—"ಹೌದು ಹೋದ ವಾರ ಹೈದ್ರಾಬಾದಿಗೆ ಹೋಗಿದ್ದೆ"

ನಾನು— ಅದ್ರ ಹಿಂದ್ಲ ವಾರ.

ವೀರಣ್ಣ—ಹುಬ್ಬಳ್ಳಿ.

ನಾನು—ಅದ್ರ ಹಿಂದ್ಲ ವಾರ

ವೀರಣ್ಣ—ಬೆಂಗಳೂರು.

ಅದ್ರ ಹಿಂದ್ಲವಾರ ಬೆಳಗಾವಿಗೂ, ಅದಕ್ಕೂ ಹಿಂದಿನ ವಾರ ಹೈದ್ರಾಬಾದಿಗೂ ಹೋಗಿದ್ದನಂತೆ, ಅದಕ್ಕೆ ಮೊದಲು ಬೆಂಗಳೂರಿಗೆ ಹೋಗಿದ್ದನಂತೆ. ಆದರೆ ಹಿಂದಿನ ವಾರ ಮೊದಲಬಾರಿ ಹೈದ್ರಾಬಾದಿಗೆ ಹೋಗಿದ್ದನಂತೆ.

ನಾನು "ಹಂಗಾದ್ರೆ ನೀನು ಪರೀಕ್ಷೆ ಕಟ್ಟೋ ಜರೂರತ್ತೇನೈತೆ. ಹಿಂಗೆ ಓಡ್ಯಾಡ್ಕೊಂಡಿರು" ಎಂದೆ.

ವೀರಣ್ಣ—ಹಂಗಲ್ಲಜ್ಜಾ ಆರತಿ ಆಟೋ ಮೊಬೈಲ್ಸ್ ಪ್ರೊ॥ ವೀರಣ್ಣ B. A. ಅಂತ ಬೋರ್ಡ್ ಹಾಕಿದ್ರೆ ಅದ್ರ ಖದ್ರೇ ಬೇರೆ.

ನಾನು—ಹಂಗಾರೆ ಆರ್ತಿ ನೆಪ್ಪು ಇನ್ನೂ ಹೋಗಿಲ್ಲ ಅನ್ನು,

ವೀರಣ್ಣ—ಆಹ್ !

ವೀರಣ್ಣ ಆಟೋಮೊಬೈಲ್ಸ್ ಬಿಸಿನೆಸ್ಸಿನಲ್ಲಿರುವ ಸುದ್ದಿ ಈಗ ಜಗಜ್ಜಾಹೀರಾಗಿದೆ. ಎರಡು ವರ್ಷಗಳ ಹಿಂದೆ ಅನಾಮಧೇಯನಾಗಿ, ಪಬ್ಲಿಸಿಟಿ ಪಡೆಯಲೆಂದು "ಕನ್ನಡ ಚಳುವಳಿಯ" ಹೀರೋ ಆಗಿ ಕೊಂಗರ ಪಿಕ್ಚರುಗಳ ಜಾಹೀರಾತು ಬೋರ್ಡನ್ನು ಕಲ್ಲಿನಿಂದ ಹೊಡೆಯುತ್ತಿದ್ದ ಹೈದ ಈಗ ಮುಗಿಲು ಹಳ್ಳಿಯ ಧನವಂತರ ಕಣ್ಮಣಿಯಾಗಿದ್ದಾನೆ.

ವೀರಣ್ಣ ಬೆಳಗಾಂ, ಬೆಂಗಳೂರು, ಹುಬ್ಬಳ್ಳಿ, ಹೈದರಾಬಾದುಗಳಿಗೆ ಹೋಗದೆ ಇರುವ ಕಾಲದಲ್ಲಿ ಮುಗಿಲುಹಳ್ಳಿಯ ಚೌಕಿ ಪೇಟೆಯ ಮೂಲೆಯೊಂದರಲ್ಲಿ ನಿಂತರೆ ಅವನು ದಿನವೊಂದಕ್ಕೆ ಕೊನೆಯ ಪಕ್ಷ ಹತ್ತಾದರೂ ಹೊಸ ಕಾರು, ಸ್ಕೂಟರು ಅಥವಾ ಟೆಂಪೋಗಳ ಮೇಲೆ ಅತ್ತಿಂದಿತ್ತ ಓಡಾಡುವ ದೃಶ್ಯವನ್ನು ನೋಡಬಹುದು.

ನನಗೇನೋ ಅದು ಹೃದಯ ವಿದ್ರಾವಕ ದೃಶ್ಯ. ಈ ಅರಿವುಗೇಡಿಯು ಇನ್ನೆಷ್ಟು ಕಾಲ ಹೀಗೆ ಕಂಡವರ ಕಾರುಗಳ ಸವಾರಿ ಮಾಡಿಕೊಂಡಿರಲು ಸಾಧ್ಯ? ಅಂಥ ಬೆನ್ ಬೆಲ್ಲಾ, ಆಂಥೋನಿ ಈಡನ್ನರನ್ನೇ ತುಳಿದ ಲೋಕ ಇವನನ್ನು ಏನು ಮಾಡೀತು ಎಂದು ಚಿಂತೆಯಾಗುತ್ತದೆ, ಆದರೆ ಅವನಿಗೆ ಅದಾವ ಚಿಂತೆಯೂ ಇಲ್ಲ.

ವೀರಣ್ಣ ನನ್ನನ್ನು ಸ್ಕೂಟರ್ ಮೇಲೆ ಹತ್ತಿಸಿಕೊಂಡು ಸಹಕಾರಿ ಸಂಘವೊಂದರ ಮುಂದೆ ನಿಲ್ಲಿಸಿದ. ಅಲ್ಲಿದ್ದ ಕಾರನ್ನು ಹತ್ತಿ ನನ್ನನ್ನು ಒಳಗೆ ಕೂಡಿಸಿಕೊಂಡು

ನಮ್ಮೂರಿನ ಮುನಿಸಿಪಾಲಿಟಿ ಬಳಿಗೆ ಹೋದ, ಅಲ್ಲಿ ಕಾರಿಳಿಸಿ, ಅಲ್ಲಿದ್ದ ಪುರಸಭೆ ಲಾರಿಯನ್ನು ಹತ್ತಿ ಅದನ್ನು ಗ್ಯಾರೇಜಿಗೆ ಕೊಂಡೊಯ್ದು. ಅಲ್ಲಿ ಲಾರಿಯನ್ನು ದೂಡಿ ಟ್ರ್ಯಾಕ್ಟರೊಂದನ್ನೇರಿ ಅದನ್ನು ಹೊಲಕ್ಕೆ ತೆಗೆದುಕೊಂಡು ಹೋದ. ಅಲ್ಲಿ ಟ್ರ್ಯಾಕ್ಟರು ಬಿಟ್ಟು, ಸೈಕಲೊಂದನ್ನು ಡಬಲ್ ರೈಡ್ ಮಾಡಿಕೊಂಡು ಊರಿಗೆ ಬಂದೆವು. ಮಂಡಿಯಂಗಡಿಯೊಂದರಲ್ಲಿ ಆ ಸೈಕಲನ್ನು ಬಿಟ್ಟು ಹೊಸದೊಂದು ಕಾರನ್ನೇರಿ ಸಿನ್ ಸಿನ್ಯಾಟಿ ಸರ್ಕಲ್ ರೆಸ್ಟುರಾಂಟಿಗೆ ಹೋದೆವು. ಇಷ್ಟೆಲ್ಲಾ ಫ್ರೀ ಲಿಫ್ಟುಗಳನ್ನು ಕೊಟ್ಟದ್ದಕ್ಕಾಗಿ ನನ್ನಿಂದ ಎರಡೂವರೆ ರೂಪಾಯಿ ಬಿಲ್ ವಸೂಲಿ ಮಾಡಿ ತಿಂಡಿತಿನ್ನಿಸಿದ.

ಈ ಮಹನೀಯನನ್ನು ನೋಡಿ ವಿಸ್ಮಯ ಚಕಿತನಾದ ನಾನು,

"ಅಯ್ಯಾ ನೀನು ಮರೆತಿರಬಹುದು. ಆದರೆ ಕಳೆದ ಅಕ್ಟೋಬರಿನಲ್ಲಿ ನೀನು ಸಕ್ಕರೆ ಕೊಡಿಸುವೆನೆಂದು ಭರವಸೆಕೊಟ್ಟು ನನ್ನಿಂದ ಐದು ರೂಪಾಯಿ ತೆಗೆದು ಕೊಂಡಿದ್ದೆ. ನೀನಿತ್ತ ಭರವಸೆ ಇನ್ನೂ ಕೈಗೂಡಲಿಲ್ಲ. ಆದುದರಿಂದ ದಯೆ ಯಿಟ್ಟು......" ಎಂದಾರಂಭಿಸಿದೆ.

"ಅದಕ್ಯಾಕ್ಯೋಚ್ನೆ ಮಾಡ್ತಿ. ಐದಾನಲ್ಲ ಆ ನನ್ನ...ಗ್ಗೆ ಕಾರು ಕೊಡುಸ್ಬೇಕು. ಬೋ...ನೆ, ನಮ್ರಾಯ್ಗೆ ಐದ್ಕೇಜಿ ಸಕ್ರೆ ಕೊಟ್ರೆ ಸೈ."

"ಅಲ್ಲೋ. ಅವನ ಸಂಬ್ಳ ನೂರಿಪ್ಪತ್ರೂಪಾಯಿ. ಅವನ್ಗೆಂಥ ಕಾರ್ಕೊಂ ಡ್ಕಂತಿ. ಜಟ್ಕಾ ಗಿಟ್ಕಾ ಕೊಡ್ಸು."

"ಹಂಗಲ್ಲಲೇ, ಹಿಂದಿನ್ಕಾಲ್ದಗೆ ಋಷಿಗ್ಳು, ಸನ್ಯಾಸಿಗಳು ತನ್ಹತ್ರ ಬಂದ್ರೆ ರಾಜ ರಥ, ಕುದ್ರೆ, ಆನೆ ಕೊಡ್ತಿದ್ರು. ಈಗ ಛಾನ್ಸು ಸೊಸೈಟಿ ಕ್ಲರ್ಕುಗಳಿಗೆ..."

"ಸರಿ ಬಿಡಪ್ಪ, ತಿಳಿತು. ನಿನ್ನ ಮಿರ್ಷ ಏಜನ್ಸಿ ಫಸ್ಟೈತೆ. ಅವ್ನಿಗೆ ಕಾರು, ಇವ್ನಿಗೆ ಸ್ಕೂಟರು. ಮತ್ತೊಬ್ನಿಗೆ ಮೋಟ್ರು ಸೈಕಲ್ಲು ಅಂತ ಓಡ್ಯಾಡ್ತಿದ್ರೆ, ನಿನ್ನ ಅವ್ರೇನಾದ್ರು ಬೀಯೆಸ್ಸಿ ಪಾಸ್ಮಾಡ್ಸಾತಾರೇನು ?

"ರಾಯರೇ, ನಿನ್ನ ಬೀಯೆ ಎಮ್ಮೆ ಗಿಮ್ಮೆ ಒಳ್ಗೇನೈತೋ ! ಮನ್ಶಾಗೆ ಮುಖ್ಯವಾಗಿ ಬೇಕಾದ್ದು ರೊಕ್ಕ ! ರೊಕ್ಕ ! ರೊಕ್ಕ ! ಇನ್ಫುಯೆನ್ಸು ! ನೆನ್ನೆಮ್ಮೆಸ್ಸಿ ಐ ಯೆ ಎಸ್ ತಗಂಡು ರೊಕ್ಕದೆದ್ರಿಗೆ ನಿವಾಳಿ ಹಾಕು. ಇವತ್ತು ಚಾಲ್ತಿ ಇರದು, ನಂದಲೇ, ಬೀಯೆಸ್ಸಿ ಫೇಲಾದ್ರೇನಂತೆ.

ಅಷ್ಟರಲ್ಲಿ ಮುಂಗಿಲು ಹಳ್ಳಿಯ ಮಾಜೀ ಪ್ರೆಸಿಡೆಂಟ್ ಹಾಗೂ ಚಾಲ್ತಿ ಪ್ರತಿನಿಧಿ (M. L. A. ಯೋ M. P. ಯೋ ಎನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ.)

"ನಮಸ್ಕಾರ ವೀರಣ್ಣೋರೆ ! ನಿಮ್ಮನ್ನೇ ಹುಡುಕ್ತಿದ್ದೆ " ಎಂದು ನಮ್ಮೆದುರಿ ನಲ್ಲಿ ನಿಂತ.

ಈರಣ್ಣ "ನಮಸ್ಕಾರ ಸ್ವಾಮಿ" ಎಂದ. ಏನ್ಸಮಾಚಾರ. ಗೋವಾನ ಮಹಾರಾಷ್ಟ್ರದ್ಾಯಿಗಿಕ್ಕಿದ್ರ್ಯಾ !

"ನಂಗೊಂದ್ಕಾರು ಬೇಕೀರಣ್ಣ"

"Fiat 1100 ನೋ ಅಂಬ್ಯಾಸೆಡರೋ ?"

"ಅಂಬ್ಯಾಸೆಡರು. ಈ ಊರ್ನೊರ್ಗೆ ನಾಕೈದು ಕೊಡ್ಸೆದಿಯಂತೆ"

ಆಗ್ಲಿ ಸ್ವಾಮಿ ! ನಿಮ್ಗೆ ಅಂಬ್ಯಾಸೆಡ್ರು ಬೇಕೇ. ನಿಮ್ಯಾಲ್ದಗೆ ಜೋಳ 85 ಪೈಸಕ್ಕೆ Kg. ಆತು. ಅಕ್ಕಿ ಕೇಜಿಗೆ ಒಂದೂವರೆ ಆತು. ರಾಗಿ ಎಂಬತ್ತಾರು ರೊಕ್ಕಿದ್ರೂ ಮಾಲಿಲ್ಲ. ಅಂದ್ಮ್ಯಾಲೆ ಅಂಬ್ಯಾಸೆಡ್ರು ಅಷ್ಟ್ ಸುಲ್ಬೇ ಸ್ವಾಮಿ, ಕಾಂಗ್ರ್ಲಿ, ನಮ್ಮೂರ್ನಗೆ ಮೂಲಂಗಿಗೆ ಗತಿಯಿಲ್ಲ. ಮಾರ್ಕೆಟ್ನಗೆ ಬದ್ನೆಕಾಯಿ, ಉಳ್ಳಾ ಗಡ್ಡಿ ಎಳ್ಡನ್ಬಿಟ್ರೆ ಮತ್ತೊಂದು ತರ್ಕಾರಿಲ್ಲ. ಸ್ವಾಮಿ, ನೀವು ಹೋಗಿ ನಾಕಣೆಗೆ ಐದು ಮೂಲಂಗಿ ತಗಂಬರ್ರೀ, ಒಂದ್ಕಾರು ಕೊಡಿಸ್ತೀನಿ. ಅಷ್ಟು ಸುಲ್ಭಲ್ರಿ. ಬಂದ್ಕೇಳಿದ್ರೆ ಕಾರ್ಕೊಡ್ಸದು. ' ನಮ್ಮಾಫೀಸಿಗೆ ಅಪ್ಲಿಕೇಷ್ನ ಹಾಕ್ರಿ. ಹೌದೋ ಅಲ್ಲೋ ರಾಯಾ !"

ದೊಡ್ಡರ್ಮಾತ್ನಗೆ ನನ್ನ ಸಾಕ್ಷಿ ಯಾಕಿದ್ದೀತು. ಅದೇನು ಅವ್ರಿಗೆ ಸರಿಯಾಗಿ ಹೇಳಿ ಕಳಿಸು." ಎಂದೆ ನಾನು.

ಆತ ಕಣ್ಣು ಬಡಿಯುತ್ತಾ ನಿಂತಿದ್ದವನು "ಎಲ್ಲೈತ್ರೀ ನಿಮ್ಮಾಫೀಸು" ಎಂದು ಕೇಳಿದ.

"ಇನ್ನೂ ಓಪನ್ನಾಗಿಲ್ಲ. ಇನ್ನೊಂದು ತಿಂಗ್ಳಿಗೆ ಓಪನ್ನಾಕ್ಕತೆ, ನೀವು ಬರ್ರೀ. ಆಫೀಸ್ ಉದ್ಘಾಟ್ನೆ ಮಾಡ್ರೀ. ಮೊದ್ಲು ನಿಮ್ಗೇ ಕಾರ್ಕೊಡಸ್ತೀನಿ" ಎಂದ.

"ಹಗತ್ಯವಾಗಿ ಆಗ್ಲಿ. ಸಂತೋಸ." ಎಂದಿತು ಆ ವ್ಯಕ್ತಿ. ದ್ರುತಗತಿಯಿಂದ ಹೊರಟುಹೋಯಿತು. ಕಾಫಿ ಕೂಡಾ ಕುಡಿಯಲಿಲ್ಲ.

"ಎಂಥೆಂಥರೋ ನಿನ್ಕೈಗೆ ಸಿಕ್ಕು ವಡ್ಯಾಡ್ತಿರ ಬೇಕಾದ್ರೆ, ನಂದೇನು ಮಹಾ ಈರಣ್ಣ ! ನಾನು ಹಿಂದೆ ಕೊಟ್ಟ ಐದ್ರುಪಾಯಿಗೆ ನೀರು ಬಿಟ್ಬಿಡ್ತಿನಿ" ಎಂದೆ ನಾನು.

"ಹಿಂಗೇ ಕಾರ್ನಗೆ ಹುಬ್ಬಳ್ಳಿಗ್ಹೋಗನೇನ್ಲೇ ? ಅಲ್ಲಿ ಬೋರ್ಡ್ ಬರ್ದ್ಕೆಕ್ಕೆ ಕೊಟ್ಟಿ ದಿನಿ ನೋಡ್ಕೊಂಡು ಬರನಂತೆ !" ಎಂದು ಕೇಳಿದ ವೀರಣ್ಣ.

ಅ. ರಾ. ಸೆ.

ಸವತೀ ಕಾಟ

"ಮನೆಯೇನೋ ಸಿಕ್ಕಿದೆ. ಅನುಕೂಲವಾಗಿಯೂ ಇದೆ. ಮುಂದಿನ ಕೋಣೆಗಳಲ್ಲಿ ದವಾಖಾನೆ ನಡಸಿ, ಹಿಂದೆ ವಾಸಿಸುವುದಕ್ಕೂ ಸಾಕಷ್ಟು ಜಾಗ ಇದೆ. ಮನೆಹಿಂದೆ ಹಿತ್ತಲು ತಕ್ಕಮಟ್ಟಿಗೆ ಇದೆ. ನೀರಿಗೆ ಭಾವಿ ಇದೆ, ಅಂದಮೇಲೆ ದವಾಖಾನೆಗೆ ಪ್ರಯೋಜನ. ನಲ್ಲಿಯನೀರಿಗೆ ನಿಶಿ ರಾತ್ರಿಯಲ್ಲಿ ಕಾಯಬೇಕಾಗಿಲ್ಲ. ಆದರೂ ಈ ಮನೆಯನ್ನು ಬಿಡಬೇಕು ಎಂದು ನಿರ್ಧರಿಸಿದ್ದೇನೆ. ಬೇರೆ ಮನೆ ಬಾಡಿಗೆಗೆ ಸಿಕ್ಕ ಕೂಡಲೆ ಕಾಗದ ಬರೆಯುತ್ತೇನೆ. ಬಂದುಬಿಡುವೆಯಂತೆ. ಇಷ್ಟು ವರ್ಷಗಳು ಕಾದಿದ್ದಿ. ಇನ್ನೊಂದೆರಡು ತಿಂಗಳು ಕಾಯುಕ್ಕೆ ಆಗುಲ್ಲವೇ" ಎಂದು ಡಾಕ್ಟರು ರಾಮಶಾಸ್ತ್ರಿಗಳು ತಮ್ಮ ಧರ್ಮ ಪತ್ನಿಗೆ ಕಾಗದ ಬರೆದು ಹಾಕಿದರು.

ಮರು ಟಪಾಲಿಗೇ ಅವರ ಹೆಂಡತಿಯ ಮಾರುತ್ತರ ಬಂತು. "ಓದು ಮುಗಿಯಲಿ ಅಂತ ನಾಲ್ಕು ವರ್ಷ ಕಾಯಿಸಿದಿರಿ. ಆಮೇಲೆ ಆಸ್ಪತ್ರೆಯಲ್ಲಿ ಅಭ್ಯಾಸ ಅಂತ ಎರಡು ವರ್ಷ ಮುಂದೆ ಹಾಕಿದಿರಿ. ಮೂರು ನಾಲ್ಕು ವರ್ಷಕ್ಕೆ ಎರಡು ಮೂರು ಬಾರಿ ಗ್ರಹಣ ಬಂದಹಾಗೆ ಬಂದು ಹಿಡಿದು ಹೋಗುತ್ತೀರಿ. ಈಗ ದವಾಖಾನೆ ಶುರುಮಾಡಿದ್ದೀರಿ. ಮನೆ ಸಿಕ್ಕಿದೆ. ನೀರು ಯಾವಾಗಲೂ ಸೇದಿದರೆ ಸಿಗುತ್ತೆ. ಅಂತಹ ಮನೆಬಿಟ್ಟು ಬೇರೆ ಮನೆ ಹುಡುಕುಕ್ಕೆ ಏನು ಕಾರಣ ? ನಾನು ಬರಬಾರದು ಅಂತ ನಿಮ್ಮ ಮನಸ್ಸಿನಲ್ಲಿ. ಇನ್ನೇನಾದರೂ ಗುಪ್ತ ಪ್ರಸಂಗ ಇದೆಯೋ ಏನೋ ? ದೇವರೇ ಬಲ್ಲ. ಗಂಡಸರನ್ನು ನಂಬೋಕಾಲವಲ್ಲ ಇದು. ನೀವು ಬಂದು ಕರೆದುಕೊಂಡು ಹೋಗದೆ ಇದ್ದರೆ, ನಾನೇ ಬಂದುಬಿಡ್ತೀನಿ. ನನ್ನ ಜತೆ ಓದುತ್ತಿದ್ದ ಇಂದೂಗೆ ಎರಡು ಮಕ್ಕಳು. ಅವಳ ಗಂಡ ಶಾಲಾಮಾಸ್ತರು. ಸರೋಜ ಪುಟ್ಟಲಾಯರನ್ನ ಮದುವೆಯಾದಳು. ಮೂರು ಮಕ್ಕಳ ತಾಯಿ. "ನಿನ್ನ ಗಂಡನಿಗೇನಮ್ಮ ಡಾಕ್ಟರು ಪರೀಕ್ಷೆಮಾಡಿದ್ದಾನೆ. ಕೈ ತುಂಬಾ ಸಂಪಾದನೆ ಆಗುತ್ತೆ" ಅಂತ ಅವರೆಲ್ಲ ಹೊಗಳ್ತಾರೆ ನನ್ನ. ಆದರೆ ನನ್ನ ಹಣೇಬರಹ ನನಗೆ ಗೊತ್ತು. ನಿಟ್ಟಿಂಗ್ ಬುಟ್ಟಿ ಎತ್ತಿಕೊಂಡು ಕಂಡ ಕಂಡವರಿಗೆ ಕುಲಾವಿ ಸ್ವೆಟರ್ ಹಾಕುತ್ತಾ ಕೂತಿರಬೇಕು ಸಂಸಾರ ಹೂಡುವುದಕ್ಕೆ ಇಷ್ಟು ಹಿಂದುಮುಂದು ನೋಡಿದರೆ ಹೇಗೆ ? ಮುಂದಿನ ಪಾಡ್ಯಕ್ಕೆ ೨೫ ಮುಗಿಯುತ್ತೆ. ನಂಗೂ ಬೇಜಾರು" ಎಂದು ಬರೆದಿದ್ದಳು.

ಬೇರೆ ಮನೆ ಸಿಗುಂಕ್ಕೆ ಮುಂಚೆ ಎಲ್ಲಿ ಬಂದುಬಿಡ್ತಾಳೋ? ಅಂತ ಡಾಕ್ಟರಿಗೆ ಭಯವಾಯಿತು. ಸಂಸಾರ ಹೂಡಬೇಕು ಅಂತ ಆಸೆ ದಿಟ ಆದರೆ ಸಂಪಾದನೇನೂ ಇರಬೇಕಲ್ಲ! ಅಣಿಯಾಗಿದೆ ಮನೆ ಅಂತ ಬಂದರೆ ಇಲ್ಲಿ ಬೇರೆ ಕಾಟ! ಅದಕ್ಕೇ ಬೇಗ ಉತ್ತರ ಬರೆದರು "ಈ ಮನೆಯಲ್ಲಿ ಸವತಿ ಕಾಟ. ಬೇರೆ ಮನೆ ಸಿಕ್ಕಿದಮೇಲೆ ತಂತಿ ಕಳಿಸ್ತೀನಿ" ಎಂದು ಮುಗುಮ್ಮಾಗಿ ಬರೆದರು.

* * * *

ಮೂರು ದಿವಸಗಳಾಗಿರಬಹುದು. ಡಾಕ್ಟರ್ ರಾಮಾಶಾಸ್ತ್ರಿಗಳು ರೋಗಿಯನ್ನು ನೋಡಲು ಹೊರಹೋಗಿದ್ದರು. ಸಂಜೆ ನಾಲ್ಕು ಗಂಟೆ ಸಮಯ. ಬಸ್ ಸ್ಟಾಂಡಿನಿಂದ ಅವರ ಹೆಂಡತಿ ಜಟ್ಕಾಮಾಡಿಕೊಂಡು, ಮನೆಗೆ ಬಂದೇಬಿಟ್ಟರು. ಮನೆಯಲ್ಲಿ ಸವತಿಕಾಟ ಎಂದು ಗಂಡ ಬರೆದರೆ ಯಾವ ಹೆಣ್ಣು ತಾನೇ ತನ್ನ ತವರಿನಲ್ಲಿ ಕೂತಿರ್ತಾಳೆ. ಕಾಗದ ಕಂಡಕೂಡಲೇ ಅಪ್ಪ ಅಮ್ಮನ ಕೂಡ ರಾದ್ಧಾಂತಮಾಡಿ ಮಾರನೆದಿನವೇ ಬಸ್ಸಿನಲ್ಲಿ ಗಂಡನೂರಿಗೆ ಒಬ್ಬಳೇ ಹೊರಟಿದ್ದಳು. "ನಾನೇನು ಚಿಕ್ಕ ಹುಡುಗೀನೇ? ಷಹರಾದರೇನು? ಬಾಯಿ ಇದೆಯಲ್ಲ" ಎಂದು ಅಮ್ಮನ್ನ ಸಮಾಧಾನಮಾಡಿ ಹೊರಟು ಬಂದಿದ್ದಳು. ಗಂಡನ ಮನೆಗೆ ಬಂದರೆ ದವಾಖಾನೆ ಕೋಣೆಗಳು ಎರಡೂ ತೆಗೆದಿದೆ. ಒಬ್ಬ ಚಿಕ್ಕ ಹುಡುಗ ಅಲ್ಲಿದ್ದಾನೆ. "ಡಾಕ್ಟರೆಲ್ಲಿ?" ಎಂದು ಕೇಳಿದಳು. ಹೊರಗೆ ಹೋಗಿದ್ದಾರೆ. ಈಗಲೇ ಬಂದು ಬಿಡ್ತಾರೆ, ಎಂದ ಆ ಹುಡುಗ. ದವಾಖಾನೆಯ ಹುಡುಗ ಅಂತ ಗೊತ್ತಾಯಿತು. "ಜಟ್ಕಾದಿಂದ ಹಾಸಿಗೆ ಪೆಟ್ಟಿಗೆ ತೆಗೆದು ಮನೆಯೊಳಗೆ ಇಡೋ" ಎಂದಳು. ಹುಡುಗ ಕಕವಿಕೆ ನೋಡಿದ. "ಇದು ಆಸ್ಪತ್ರೆ ಅಲ್ಲಮ್ಮಾ! ಬರೀ ಔಷಧಿಕೊಟ್ಟು ಕಳಿಸ್ತಾರೆ. ಮಲಗಿ ಕೊಳ್ಳಕ್ಕೆ ಡಾಕ್ಟರ್ ಒಪ್ತಾರೋ ಇಲ್ಲವೋ?" ಎಂದ ಆ ಹುಡುಗ.

ಸಧ್ಯ! ಡಾಕ್ಟರು ಆ ಹೊತ್ತಿಗೆ ಹಿಂತಿರುಗಿದರು. "ತಂತಿ ಕಳಿಸಬಾರದಾಗಿತ್ತೆ, ಬರ್ತೀನಿ ಅಂತ, ಬಸ್‌ಸ್ಟಾಂಡಿಗಾದರೂ ಬರ್ತಿದ್ದೆ. ಏನು ಅಂತಹ ಅವಸರ! ನನ್ನ ಕಾಗದ ಬರಲಿಲ್ಲವೇ?" ಎಂದು ಹೇಳುತ್ತಾ ಡಾಕ್ಟರು, ಹುಡುಗನಿಗೆ "ಅಮ್ಮಾವ್ರ ಸಾಮಾನು ತೆಗೆದು ಮನೆಯೊಳಗೆ ಇಡೋ" ಎಂದರು. ಮುಂದಿನ ಕೋಣೆಯೊಳಗೆ ಒಳಬಾಗಿಲ ಬೀಗ ತೆಗೆದರು. "ಬಾ, ಹುಡುಗ ಸಾಮಾನು ತರ್ತಾನೆ, ಮನೆ ಸ್ವಲ್ಪ ಗಲೀಜಾಗಿದೆ ಆ ಮೇಲೆ ಸರಿಮಾಡಿಕೋಬಹುದು" ಎಂದು ಹೆಂಡತಿಯನ್ನು ಕರೆದುಕೊಂಡು ವಾಸದ ಕೊಠಡಿಗಳತ್ತ ಹೋದರು.

ಆ ರಾತ್ರಿ ಹೋಟಲಿಂದ ಊಟ ಯಥಾಪ್ರಕಾರ ಬಂದಿತ್ತು. ಇಬ್ಬರೂ ಅದನ್ನೇ ಊಟ ಮಾಡಿದರು. ಆ ತನಕ ಡಾಕ್ಟರು ಬಂದ ರೋಗಿಗಳನ್ನು ಅವರ ಸ್ನೇಹಿತರನ್ನು ಮೆಚ್ಚಿಸುವುದರಲ್ಲೇ ನಿರತರಾಗಿದ್ದರು. ಹೋಟಲಿಂದ ಹುಡುಗ ಊಟ ತಂದಿಟ್ಟು ಹೋಗಿಬರ್ತೀನಿ ಎಂದು ಹೇಳಿದಾಗಲೇ ಡಾಕ್ಟರಿಗೆ ವ್ಯವಧಾನ

ಸಿಕ್ಕಿದ್ದು. ಆ ಮೇಲೆ ಊಟ ಆ ಹೊತ್ತಿಗೆ ಹೆಂಡತಿ ಇದ್ದುದರಲ್ಲಿ ಮನೆಯನ್ನು ವಾರಣ ಮಾಡಿದ್ದಳು. ಊಟ ಆದಮೇಲೆ ಟಿಫಿನ್ ಕ್ಯಾರಿಯರ್ ಮತ್ತು ತಟ್ಟೆಗಳನ್ನು ತೊಳೆದು ಅಡಿಗೆ ಮನೆಯಲ್ಲಿಟ್ಟು ಬಂದು ಕೂತಳು. ಸ್ವಲ್ಪ ಧುಮು, ಧುಮು ಮುಖದಲ್ಲಿ.

"ನಾಳೆಯಿಂದ ಇಲ್ಲೇ ಅಡಿಗೆ ಮಾಡ್ತೀನಿ. ಪಕ್ಕದ ಮನೆಗೆ ಹೋಗಿ ಹಾಲಿನವಳನ್ನು ಕಳಿಸಿ ಎಂದು ಹೇಳಿಬಂದಿದ್ದೇನೆ. ಬೆಳಿಗ್ಗೆ ಅಂಗಡೀಗೆ ಹೋಗಿ ಸಾಮಾನು ತರ್ತೀನಿ. ನಿಮ್ಮ ಕೆಲಸಕ್ಕೆ ತೊಂದರೆ ಆಗದಹಾಗೆ ಮಾಡಿದರಾಯಿತಲ್ಲ" ಎಂದಳು.

"ಸರಿ ಅದಾಯಿತು ಆದರೆ ಅದ್ಯಾಕೆ ಅಷ್ಟು ಅವಸರದಲ್ಲಿ ಬಂದೆ" ಎಂದ ಡಾಕ್ಟರ್ ರಾಮಶಾಸ್ತ್ರಿ.

"ಈ ಮನೆ ಅಣಿಯಾಗಿದ್ದರೂ ಬಿಡಬೇಕು. ಇಲ್ಲಿ ಸವತಿ ಕಾಟ ಅಂತ ಬರೆದಿದ್ದಿರಿ. ಸವತೀನ ನೋಡಿಕೊಂಡು ಹೋಗೋಣ ಅಂತ ಬಂದೆ. ನೋಡಿದಮೇಲೆ ಮುಂದೇನು ಮಾಡಬೇಕು ಅಂತ ಯೋಚಿಸಬೇಕು" ಎಂದಳು ಮಡದಿ. ಮುಖ ಇನ್ನು ಧುಮ ಧುಮ ಗುಡುತ್ತಲೇ ಇತ್ತು.

ಸವತಿ ಮಾತು ಎತ್ತಿದಾಗಲೇ ಡಾಕ್ಟರು ನಗುಕ್ಕೆ ಶುರುಮಾಡಿದರು. ಈಗ ಅದರ ಅರ್ಥವಿವರಣೆಮಾಡಿದರೆ ನಿನಗೆ ಸಮಾಧಾನವಾಗುಲ್ಲ. ಒಂದೆರಡು ದಿನ ಇಲ್ಲಿದ್ದರೆ ಅದರ ಅನುಭವ ನಿನಗೇ ಆಗುತ್ತೆ. ಈ ಊರಲ್ಲಿ ದವಾಖಾನೆ ಇಟ್ಟಿದ್ದೀನಿ. ಹೆಚ್ಚು ಪರಿಚಯ ಇಲ್ಲ. ಹೊಟ್ಟೆಪಾಡಿಗೆ ಸಾಕಷ್ಟು ಸಿಗುತ್ತೋ ಇಲ್ಲವೊ ಎಂದು ಅನುಮಾನ ಪ್ರಾಕ್ಟೀಸ್ ಸ್ವಲ್ಪ ಕುದುರಿದ ಮೇಲೆ ಕರೆಸಿಕೊಳ್ಳೋಣ ಎಂದಿದ್ದೆ. ಆದರೇನಾಯ್ತು ಬಂದಿದ್ದಿ ಇದ್ದುದರಲ್ಲೇ ಸುಖವಾಗಿರೋಣ" ಎಂದು ಪುಸಲಾಯಿಸುಕ್ಕೆ ಶುರು ಮಾಡಿದರು.

"ಡಾಕ್ಟರ ಕೆಲಸ ಯಾವ ಹೊತ್ತು ಅಂದರೆ ಆ ಹೊತ್ತಿನಲ್ಲಿ ರೋಗಿಗಳು ಬಂದು ಎಬ್ಬಿಸುತ್ತಾರೆ. ನನಗೇನಾದರೂ ತುಂಬಾ ನಿದ್ರೆ ಬಂದಿದ್ದರೆ ನಿನಗೆ ಎಚ್ಚರವಾಗಿದ್ದರೆ ನೀನೇ ಹೋಗಿ ಬಾಗಿಲು ತೆಗಿ, ಏನು ಬೇಕು ಅಂತ ಕೇಳು. ಅಗತ್ಯಬಿದ್ದರೆ ನನ್ನನ್ನೆಬ್ಬಿಸು ಎಂದೂ ಡಾಕ್ಟರು ಹೆಂಡತಿಗೆ ಸೂಚನೆ ಇತ್ತರು.

* * * *

ಬೆಳಗಿನ ಝಾಮ ಐದೂವರೆ ಗಂಟೆಸಮಯ. ಬಾಗಿಲಹತ್ತಿರ "ಡಾಕ್ಟರೇ, ಡಾಕ್ಟರೇ" ಅಂತ ಯಾರೋಬೊಬ್ಬೆ ಹಾಕುತ್ತಿದ್ದಾರೆ. ಮೊದಲು ಎಚ್ಚರವಾದದು ಡಾಕ್ಟರ್ ಹೆಂಡತಿಗೆ. ಎದ್ದು ಹೋಗಿ ಹೊರಬಾಗಿಲತೆಗೆದಳು. ನಿಂತಿದ್ದ ಹಳ್ಳಿಯುವ

"ಅವ್ಮಾವ್ರೇ ನನ್ನ ಹೆಂಡ್ರಿಗೆ ಹೊಟ್ಟೆಶೂಲೆ ಬುದಿದೆ ವಿುಲವಿುಲ ವದ್ಯಾಡತ್ತಾ ಇದಾಳೆ ನಿನ್ನೆ ರಾತ್ರಿಯಿಂದ. ಅದಕ್ಕೆ ಓಡಿಬಂದೆ" ಹಾಗಾದರೆ ಡಾಕ್ಟರನ್ನು ಎಬ್ಬಿಸಿ ಕಳಿಸ್ತೀನಪ್ಪಾ ತಡಿ" ಎಂದಳು ಡಾಕ್ಟರ್ ಹೆಂಡತಿ.

ಬೇಡ ಅವ್ಮಾವ್ರ ಡಾಕ್ಟರನ್ನ ಎಬ್ಬಿಸೋದು ಬೇಡ ಅವರಿಗೇಕೆ ತೊಂದ್ರೆ ಈ ಈ ಮನೆ ಹಿತ್ತಿಲಲ್ಲಿ ಹಾಲುಂಬೇವಿನ ಮರ ಇದೆಯಲ್ಲ, ಅದರ ಹಾಲು ಸ್ವಲ್ಪ ಬಿಡಿಸಿ ಕೊಂಡು ಹೋಗ್ತೀನಿ. ಹೊಟ್ಟೆಮೇಲೆ ಆ ಹಾಲು ಬಳಿದು ಅರಿಶಿನ ಹಚ್ಚಿದರೆ ಹೊಟ್ಟೆ ಶೂಲೆ ಹೋಗಿ ಬಿಡುತ್ತೆ" ಎಂದ. ಅದಕ್ಕೇನಪ್ಪಾ! ತೊಗೊಂಡು ಹೋಗು" ಎಂದಳು ಡಾಕ್ಟರ ಹೆಂಡತಿ.

ಬೆಳಿಗ್ಗೆ ಒಂಭತ್ತರ ಸಮಯಕ್ಕೆ ಡಾಕ್ಟರು ತಮ್ಮ ನಿತ್ಯಯಾತ್ರೆಗೆ ಹೊರಟರು ಗುಡ್ಡದಹಳ್ಳಿಯ ಪಟೇಲರು ಹೇಳಿ ಕಳಿಸಿದ್ದಾರೆ. ಹೋಗಿ ಬರೊಹೊತ್ತಿಗೆ ಸಂಜೆ ಆದರೂ ಆಗಬಹುದು. ನೀನು ಊಟ ಮುಗಿಸಿರು. ಎಂದು ಹೇಳಿ ಸೈಕಲ್ ಹತ್ತಿ ಹೋದರು. ಆ ಬೆಳಿಗ್ಗೆ ಹತ್ತು ಗಂಟೆಯ ಸಮಯಕ್ಕೆ ದವಾಖಾನೆಗೆ ಇಬ್ಬರು ಹೆಂಗಸರು ಬಂದರು. ಡಾಕ್ಟರಿಲ್ಲ ಎಂದು ಹುಡುಗ ಹೇಳಿದಾಗ ಮನೆಯವರನ್ನು ನೋಡಿ ದರೂ ಸಾಕು ಎಂದರು ದವಾಖಾನೆಯ ಹುಡುಗ ಸುದ್ದಿ ಮುಟ್ಟಿಸಿದಾಗ ಡಾಕ್ಟರ ಹೆಂಡತಿ ಹೊರ ಕೊಠಡಿಗೆ ಬಂದು "ಏನು ಬೇಕಾಗಿತ್ತು ? ಎಂದರು. "ಅವ್ವಾ ಹಾಲು ಬೇವಿನಮರದಿಂದ ನಾಲ್ಕೆಲೆ ಕಿತ್ತುಕೊಂಡು ಹೋಗ್ತೀವಿ ಮಾವಂಗ ಲಕ್ವಾ ಬಡಿದಿದೆ. ಎಲೆ ಕಟ್ಟಿದರೆ ಕಾಲು ಬರುತ್ತೆ" ಎಂದು ಹೇಳಿದರು. ಡಾಕ್ಟರಗಿತ್ತಿ ಹ್ಞ ಅನ್ನಲೇ ಬೇಕಲ್ಲ.

ಮಧ್ಯಾಹ್ನ ೧ ಗಂಟೆಯಹೊತ್ತಿಗೆ ಮೂರು ಜನ ಸಾಬರು ಪೆಟ್ಟುಬಿದಿದ್ದ ಒಬ್ಬನನ್ನು ಹೊತ್ತುತಂದರು. "ಮನೇಲಿ ಡಾಕ್ಟರಿಲ್ಲವಲ್ಲಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿ" ಎಂದಳು ಡಾಕರ ಮಡದಿ. "ಡಾಕ್ಟರಿಗೋಸ್ಕರ ಬರ್ಲಿಲ್ಲವ್ವ. ಹಾಲು ಬೇವಿನ ಕೊಂಬೇನ ಒಡೆದಕಾಲಿಗೆ ಕಟ್ಟಿದರೆ ವಾಸಿಯಾಗುತ್ತೆ. ಅದಕ್ಕೇ ಬಂದೆವು, ಸರಿಯಾದ ಒಂದು ಕೊಂಬೆ ಕಿತ್ತುಕೋತೀವಮ್ಮಾ" ಎಂದರು. ಈ ಮಾತಾಡ್ತಾ ಇರುವಾಗಲೇ ಒಬ್ಬ ಸಾಬ ಹಿತ್ತಲಿಗೆ ಹೋಗಿ ಒಂದು ಕೊಂಬೆಯನ್ನು ಕತ್ತರಿಸಿತಂದು ಅದನ್ನು ರೋಗಿಯ ಕಾಲಿಗೆ ಕಟ್ಟಿ ನಂತರ ಗಾಡಿಯಲ್ಲಿ ಸಾಗಿಸಿಕೊಂಡು ಹೋದರು. "ಅವ್ವಾ ಈ ರಸ್ತೆಲೇ ಪೆಟ್ಟುಬಿತ್ತು. ಅವನ ನಸೀಬು ಹತ್ತಿರವೇ ಹಾಲುಬೇವಿನ ಮರ ಸಿಕ್ತು" ಎಂದರು, ಹೋಗುವಾಗ.

ಇದೇ ರೀತಿ ಸಂಜೆಹೊತ್ತಿಗೆ ನಾಲ್ಕಾರುಜನ ಡಾಕ್ಟರ ದವಾಖಾನೆಗೆ ಬಂದರು. ಒಬ್ಬರಾದರೂ ಡಾಕ್ಟರನ್ನು ಹುಡುಕಿಕೊಂಡು ಬಂದಿರಲಿಲ್ಲ. ಅವರ ಮನೆಹಿತ್ತಲ ಹಾಲುಂಬೇವಿನಮರದ ಚಿಕಿತ್ಸೆಗೆ ಬಂದವರೇ.


* * * *

ಸಂಜೆ ಡಾಕ್ಟರು ಹಿಂತಿರುಗಿದಾಗ ಸುಸ್ತುಬಡಿದುಹೋಗಿದ್ದರು. "ದಾರಿಯಲ್ಲಿ ಬೈಸಿಕಲ್ ಪಂಕ್ಚರ್ ಆಯಿತು. ನಡೆದೂನಡೆದೂ ಕಾಲು ಬಿದ್ದುಹೋಯಿತು" ಎಂದು ಉಶ್ಯಪ್ಪಾ ಅಂತ ಕೂತರು.

ಸ್ವಲ್ಪ ಸುಧಾರಿಸಿಕೊಂಡಮೇಲೆ ಮಡದಿ ತಂದುಕೊಟ್ಟ ಕೆಂಡರೊಟ್ಟಿ ಕಾಫಿ ಮುಗಿಸಿದಮೇಲೆ "ಊರಿನಲ್ಲಿ ಏನುಸಮಾಚಾರ" ಎಂದು ಕೇಳಿದರು.

ಡಾಕ್ಟರ ಹೆಂಡತಿ ಬೆಳಗಿನಿಂದ ದವಾಖಾನೆಗೆ ಬಂದಿದ್ದವರ ವರದಿ ಒಪ್ಪಿಸಿದರು. ಆಗ ಡಾಕ್ಟರು " ಈಗರ್ಥವಾಯಿತೇ ಸವತಿಕಾಟ ! ಆ ಹಾಲು ಬೇವಿನಮರವೇ ನನ್ನ ಜತೆಗೂ ಯಶಸ್ವಿಯಾಗಿ ಪೈಪೋಟಿ ನಡಿಸುತ್ತಿದೆ. ಅದಕ್ಕೇ ಈ ಮನೆ ಬಿಡಬೇಕು ಅಂತ. ನಾನು ಮರಕಡಿಯುಕ್ಕೆ ಮನೆ ಮಾಲೀಕ ಒಪ್ಪಲಿಲ್ಲ" ಎಂದು ಹೇಳಿದರು.

"ಸವತಿಕಾಟ ಅಂತ ನೀವು ಬರೆದದ್ದು ನಿಮಗೆ ಸವತಿಕಾಟ ಅಂತಲೇ ಅಂದ್ರೆ ನಾನು ನನ್ನ ಸವತಿ ಎಂದು ಅರ್ಥಮಾಡಿಕೊಂಡೆ. ಸುಮ್ಮಸುಮ್ಮನೆ ವ್ಯಥೆ ಪಟ್ಟೆನಲ್ಲ" ಎಂದಳು ಡಾಕ್ಟರ ಹೆಂಡತಿ. ಆಕೆಯ ಮುಖದಮೇಲೆ ಮಿಡುಕಾಡುತ್ತಿದ್ದ ಧುಮು ಧುಮು ಆಗ ಮಾಯವಾಯಿತು.



ಬೈಸಿಕಲ್ ಟ್ಯಾಕ್ಸ್ ತೆಗೆದರು ಅಂತ ಮೇಲೆ ಬೀಳುಕ್ಕೇ ಬರ್ತೀಯಲ್ಲಪ್ಪಾ !

ಸುಖಾಗಮನ

ಬೀದಿಯ ಗೇಟು ತೆಗೆದುಕೊಂಡು ಒಳಬಂದ ವ್ಯಕ್ತಿಯನ್ನು ಕಂಡ ಕೂಡಲೇ ಬೀದಿಯ ಬಾಗಿಲ ಮುಂದೆ ಪಾಂಡೀ ಆಡುತ್ತಿದ್ದ ಆರು ವರ್ಷದ ಇಂದಿರೆಯ ಮುಖ ಅರಳಿತು. ಆಟವನ್ನು ಅಷ್ಟಕ್ಕೆ ನಿಲ್ಲಿಸಿ ಬಿರಿಬಿರಿ ಓಡುತ್ತ ಮನೆಯೊಳಗೆ ನುಗ್ಗಿ "ಅಮ್ಮಾ ರಾಮಯ್ಯ ಬಂದ, ಅಮ್ಮಾ ಬಂದ ರಾಮಯ್ಯ" ಎಂದು ಕಿರುಚಿಕೊಂಡಳು. ಅವಳ ಮಾತನ್ನು ಮನೆಯಲ್ಲಿ ಯಾರೂ ನಂಬಲಾರರು. "ಹೌದೇ ?" ನಿಜವೇ ! ! "ಸುಳ್ಳುಸುಳ್ಳಾಗಿ ಅನ್ನುತ್ತೀಯೇನೇ ಇಂದೂ ?" "ಹುಲಿ ಬಂತು ಹುಲಿ, ಹುಲೀ ಬಂತು ಹುಲೀ" ಕತೆ ಇಲ್ಲತಾನೇ ?"...ಎಂಬಂತಹ ಹಲವು ಮಾತುಗಳು ಹಲವು ಧ್ವನಿಗಳಲ್ಲಿ ಏಕಮುಖವಾಗಿ ಎದ್ದವು.

ಅನ್ನ ಬಸಿಯುತ್ತಿದ್ದ ಭಾಗೀರತಮ್ಮ ಅಷ್ಟಕ್ಕೆ ತಪ್ಪಲೆಯನ್ನು ಎಬ್ಬಿಸಿ ಕುಕ್ಕರಿಸಿ ಮುಸುರೆಯ ಕೈ ಸಹ ತೊಳೆಯದೆ ಬೀದಿಗೆ ಓಡಿಬಂದಳು. ಕ್ರಾಫ್ ಬಾಚಿಕೊಳ್ಳು ತ್ತಿದ್ದ ಮೂರ್ತಿ ಬಾಚಣಿಗೆಯನ್ನು ಬಿಸುಟು ದಡದಡನೆ ಮಹಡಿಯಿಂದ ಇಳಿದುಬಂದ. ಮುಖಕ್ಕೆ ಪೌಡರ್ ಬಳಿದುಕೊಳ್ಳುತ್ತಿದ್ದ ಲೀಲೂ ಸರಿಯಾಗಿ Make up ಮಾಡಿ ಕೊಳ್ಳದೆ ಬಾಬಯ್ಯನಂತೆ ಬಂದು ನಿಂತಳು. ಮಹಡಿಯ ಕೊನೇ ...ರೂಮಲ್ಲಿ ಕುಳಿತು ಆಫೀಸ್ ಫೈಲುಗಳನ್ನು ತಿರುವುತ್ತಿದ್ದ ರಾಯರ ಕಿವಿಗೂ ರಾಮಯ್ಯನ ಆಗಮನ ಕೇಳಿಸಿಬಿಟ್ಟಿತೆಂದರೆ ನೆರೆಹೊರೆಯವರ ಕಿವಿಗೆ ಬೀಳದಿರುತ್ತದೆಯೇ ?

ವಿಠ್ಠಲರಾಯರ ಮನೆಯಲ್ಲಿ "ಇದೇನಪ್ಪ ಕೋಲಾಹಲ ! ಅವರ ಚಚ್ಚಲು ಬಸುರೀ ಹುಡುಗಿ ನಂದಿನಿ ಗಂಡನ ಮನೆಯಿಂದ ಬಂದಳೋ ?" ಎಂದು ನೋಡು ವುದಕ್ಕೆ ನೆರೆಹೊರೆಯವರೆಲ್ಲಾ ತಂತಮ್ಮ ಮನೆಯ ಕಿಟಕಿಯ ಬಾಗಿಲನ್ನು ಅರ್ಧ ತೆಗೆದು ಇಣಿಕಿ ನೋಡಿದರು.

ರಾಮಯ್ಯನನ್ನು ಕಂಡು ವಿಠ್ಠಲರಾಯರ ಮನೆಯವರಿಗೆ ಉಂಟಾದ ಹಿಗ್ಗು, ಅಮೇರಿಕಕ್ಕೆ ಆರು ವರ್ಷಗಳ ಹಿಂದೆ ಓದುಕ್ಕೆ ಹೋಗಿದ್ದ ಮೊದಲ ಮಗ ಚಂದೂ ಹಿಂದಿರುಗಿ ಬಂದಾಗಲೂ ಸಹ ಏರ್ಪಟ್ಟಿರಲಿಲ್ಲ ! ಮೂರ್ತಿ S. S. L. C. ಪರೀಕ್ಷೆ ಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ಯಾಸ್ ಮಾಡಿದಾಗಲೂ ಇಷ್ಟೊಂದು ಆನಂದವೇರ್ಪ ಡಲಿಲ್ಲ ! ಎರಡು ತಿಂಗಳ ಹಿಂದೆ ಇದೇ ರೀತಿ ಮನೆಯ ಬಾಗಿಲಲ್ಲಿ ಪ್ರಸನ್ನನಾಗಿ ಮೈಲಿಗೇ ಬಟ್ಟೆಗಳನ್ನು ಒಗೆಯಲು ತೆಗೆದುಕೊಂಡು ಹೋದ ಅಗಸರ ರಾಮಯ್ಯ ಇಗೋ ಮತ್ತೆ ಬಂದನಲ್ಲಾ ಎಂಬ ಸಂತೋಷ ಸಮಾರಂಭ ಅದು.

—ಶ್ರೀಮತಿ ಜ. ಶ್ರೀ.

ಹಾಳು ಈ (ಹಿಕ್ !) ಕ್ಕಳಿಕೆ

ಅಂದು ಬೆಂಗಳೂರು ರೇಸಿನ ಮೂರನೆಯ ದಿನ. ದಿನದ ಎರಡನೆಯ ರೇಸ್ ಮುಗಿದು ಮೂರನೆಯ ರೇಸಿನ ಕುದುರೆಗಳ ಮತ್ತು ಅವುಗಳ ಜಾಕಿಗಳ ಪ್ರದರ್ಶನ ವಾಗುತ್ತಿತ್ತು. ನಾನೂ ಇತರರಂತೆ ಖಾಲಿಜೋಬಿನಲ್ಲಿ ಕೈ ಬೆರಳುಗಳನ್ನಾಡಿಸುತ್ತಾ ನೋಡುತ್ತಿದ್ದೆ. ಆಗಲೇ ನನಗೆ ಆತನ ಭೇಟಿಯಾಗಿದ್ದು.

"ಓಹೋ ಎಷ್ಟು ದಿನವಾಯ್ತಯ್ಯಾ ! (ಹಿಕ್ !)" (ನನ್ನ ಬೆನ್ನಿನ ಮೇಲೆ ಗುದ್ದು) ತಾಳು ನೀನಾಗ ಇನ್ನೂ (ಹಿಕ್) ಹೋಗಲಿ ನಾನ್ಯಾರು ನಿನಗೆ (ಹಿಕ್) ಬಂತೋ ? ಇಲ್ಲ ನನಗ್ಗೊತ್ತು. ನಾನೋಡು ಮೊದಲಿದ್ದಹಾಗೇ (ಹಿಕ್) ನೀನು ಮಾತ್ರ ಮೊದಲು (ಹಿಕ್) ಹಾಕ್ತಾ ಇದ್ದೋನು ಈಗ ಈ (ಹಿಕ್) ಈಗಲಾದರೂ ಜ್ಞಾಪಕಬಂತೋ ?" (ಪುನಃ ನನ್ನ ಬೆನ್ನಿನಮೇಲೆ ಗುದ್ದು).

"ಜ್ಞಾಪಕವೇನೋ ಬಂತು ಆದರೆ ಹೆಸರು ಮತ್ತು ಎಲ್ಲೋ ಮರೆತುಹೋಗಿದೆ" ಅಂತ ತಲೆಕೆರೆದುಕೊಂಡೆ.

ತಾಳು ಆದೂ ನಿನಗೆ (ಹಿಕ್) ಬರುತ್ತೆ. ಸಾವಿರದ ಒಂಭೈ (ಹಿಕ್) ಅಲ್ಲ ತಾಳು ಸಾವಿರದ ಒಂಭೈನೂರ (ಹಿಕ್) ಈ ಹಾಳು ಬಿಕ್ಕ ಈಗೀಗ (ಹಿಕ್) ಆಗಿದೆ ಸಾವಿರದ (ಹೆಕ್ ಹಿಕ್) ನಡೆದ ಒಂದು ಘಟನೆ (ಹಿಕ್) ನಿಂಗೇ ಜ್ಞಾಪಕಕ್ಕೆ ಬರುತ್ತೆ. ನಾನೂ ನೀನೂ ಸಾವಿರದ ಒಂಭೈ (ಹಿಕ್) ನಲ್ಲಿ (ಹಿಕ್) ಮಸ್‌ನಲ್ಲಿ (ಹಿಕ್) ಹೋಗ ಬೇಕಂತ ಎಲ್ಲಾ ಸಿದ್ಧವಾದೆವು. ಆಗ ಆ ಧತ್ ಅವನ ಹೆಸರೇ ಜ್ಞಾಪಕ (ಹಿಕ್) ಹೋಗಲಿಬಿಡು ಆಮೇಲೆ (ಹಿಕ್) ನಮ್ಮ ಜೊತೆ ಅವನೂ ಬರ್ತೇನೆ ಅಂತ (ಹಿಕ್) ಜ್ಞಾಪಕಕ್ಕೆ ಬಂತೆ ? ಆದರೆ ಅವನು ಬರೋದು ನಮ್ಮಿಬ್ಬರಿಗೂ (ಹಿಕ್) ಇರಲಿಲ್ಲ. ಅದಕ್ಕೆ ಏನು (ಹಿಕ್) ಮಾಡಿದೆವು ಗೊತ್ತೆ ?

"ಇಲ್ಲ" ಅಂದೆ ದಿಗ್ಭ್ರಮೆಯಿಂದ.

" ನಾನೂ ನೀನೂ ಕೊನೆಗೆ...(ಹಿಕ್ !) ಗೆ ಹೋಗೋದೇ ಇಲ್ಲಾಂತ ತೀರ್ಮಾ ನಿಸಿ ಅವನನ್ನ...(ಹಿಕ್ !) ಓಡಿಸಿದೆವು. ಆಮೇಲೆ ನಾನೂ ನೀನೂ ಇಬ್ಬರೇ

(ಹಿಕ್ !) ಥತ್ ! ಈ ಹಾಳು (ಹಿಕ್ !) ಒಂದು ದಿನ ನನ್ನನ್ನು (ಹಿಕ್ !)—ಅಲ್ಲಿ ನಿಮ್ಮ ಅತ್ತೆ...ಅಲ್ಲ (ಹಿಕ್ !) ಶ್ರೀಮಂತಿ...(ಹಿಕ್ ! ಹಿಕ್ !) ನನ್ನನ್ನು ಬಹಳ—(ಹಿಕ್ !) ಮಾಡಿದರು. ಹೇಳು—ಈಗಲಾದರೂ ನನ್ನ (ಹಿಕ್ !)—ನಿನಗೆ ಬಂತೆ ? "

ನಾನಂ ಪುನಃ ತಲೆ ಕೆರೆದುಕೊಂಡೆ–ಈ ಹಿಕ್ ಸ್ನೇಹಿತ ಯಾರೂಂತ ಬಿಲ್ ಖುಲ್ ತಿಳಿಯಲಿಲ್ಲ. ಪುನಃ ಅವನ ಮುಖ ನೋಡೋಣವೆಂದು ತಲೆ ಎತ್ತಿದೆ. ಆತ ಅಲ್ಲಿರಲಿಲ್ಲ—ಈಗಲೇ ಮರದ ಬೇಲಿಯ ಹತ್ತಿರ ನಿಂತು ಅರಚುತ್ತಿದ್ದ—" ಕಮಾನ್ ...(ಹಿಕ್ !)...ಗೋಹರ್‌ಕಾ...(...(ಹಿಕ್ !) " ಅಂತ. ಇದುವರೆವಿಗೆ ನಾನೆಷ್ಟು ಪ್ರಯತ್ನ ಪಟ್ಟರೂ ಆತ ನನಗೆ ಪುನಃ ಭೇಟಿಯಾಗಿಲ್ಲ.

ಈ ಲೇಖನ ಅಕಸ್ಮಾತ್ತಾಗಿ ಆ ಮಹಾನುಭಾವನ ಕಣ್ಣಿಗೆ ಬಿದ್ದರೆ,ದಯವಿಟ್ಟು ಈ ಪತ್ರಿಕೆಯ ಸಂಪಾದಕರಿಗೆ ತಮ್ಮ ಪರಿಚಯ ತಿಳಿಸಲಿ. ಅವರ ಆಶ್ರಯದಲ್ಲಿರುವ ನನಗೆ ವಿಷಯ ತಿಳಿಯುತ್ತೆ. ಬೆಂಗಳೂರು ರೇಸಿನ ಮೂರನೇ ದಿನ ಆತ ಗುರುತು ಹಿಡಿದ ಬಿಳಿಪ್ಯಾಂಟು ಹಸುರು...(ಹಿಕ್ !) ಧರಿಸಿದ ವ್ಯಕ್ತಿಯೇ ನಾನು.

—" ಕೇಫ "

" ಮೆಣಸಿನಪುಡಿ ಕುಟ್ಟುಕ್ಕೆ ಬರ್‍ತಾಳಲ್ಲಾ ! ಆಕೆ ವರಮಾನ ತೆರಿಗೆ ಕೊಡ್ತಾಳಂತೆ" ಎಂದು ಹೆಂಡತಿ ಹೇಳಿದಾಗ, ಗಂಡ " ಹಾಗೇನೇ !! ನೀನೂ ಮೆಣಸಿನ ಪುಡಿ ಕುಟ್ಟುಕ್ಕೆ ಹೋಗಬಾರದೇನೇ ? ನನ್ನ ಕುಟ್ಟೋ ಬದಲು " ಎಂದುಬಿಡೋದೇ !

* * * *

ಶಿಲಾಪ್ರತಿಮೆಗಳನ್ನು ಸ್ಥಾಪಿಸಬಹುದು, ಇನ್ನು ಮೇಲೆ, ಎಂದು ದಿಲ್ಲಿಯಲ್ಲಿ ಮೊನ್ನೆ ಮೊನ್ನೆ ತೀರ್ಮಾನಿಸಿದರಂತೆ.

—ಹೊಸ ಪ್ರತಿಮೆಗಳನ್ನೇ ಸ್ಥಾಪಿಸಿ, ಮ್ಯೂಸಿಯಂನಿಂದ ಹಳೆಯದನ್ನು ತರಬೇಡಿ ಅಂತ ಕಾಗೆಗಳೆಲ್ಲವೂ ರರಾವು ಮಂಡಿಸಿದುವಂತೆ.

* * * *

ನವಿಲು ಕುಣಿಯುತ್ತೆ ಅಂದರೆ ನವಿಲಿನ ಬಾಲಾನೂ ಪುಡಾರಿಯಂತೆ ನಲಿಯುತ್ತಂತೆ.

* * * *

ಆಲೂರಿನಲ್ಲಿ

ಸುಮಾರು 3–4 ವರ್ಷಗಳ ತರುವಾಯ ಆಲೂರಿಗೆ ಮತ್ತೆ ನಾನು ಹೋದಾಗ ಅಲ್ಲಿ ಗುಲ್ಲೋ ಗುಲ್ಲು. ಯಾರ ಬಾಯಿನಲ್ಲಿ ನೋಡಿದರೂ ಒಂದೇ ಮಾತು. ಸೀರೆ ಬಾರ್ಡರ್ ಬಗ್ಗೆ ಮಾತನಾಡುವ ಹೆಂಗಸರು, ದಿಲೀಪ್ ಕುಮಾರ್ ಬಗ್ಗೆ ಮಾತನಾಡುವ ಗಂಡಸರು, ಅವರ ಬಗ್ಗೆ ಮಾತನಾಡುವ ಇವರು. ಇವರ ಬಗ್ಗೆ ಮಾತನಾಡುವ ಅವರು, ಎಲ್ಲರೂ ಅದೇ ವಿಷಯ. ಅಂದರೆ ಆ topic ಎಷ್ಟು ಪ್ರಾಮುಖ್ಯದ್ದು! ವಿಷಯ ಇಷ್ಟೆ. ಆ ಊರಿನ ಟೈಲರ್ ವೆಂಕೋಬನ ಮಕ್ಕಳಿಬ್ಬರು ತಪ್ಪಿಸಿಕೊಂಡು ಹೋಗಿದ್ದವು. ಹಿಂದಿನ ದಿನ ತಪ್ಪಿಸಿಕೊಂಡು ಹೋಗಿದ್ದು ಅದುವರಿವಿಗೂ ಸಿಕ್ಕಿರಲಿಲ್ಲ. ಎಲ್ಲರ ಬಾಯಲ್ಲಿಯೂ ವೆಂಕೋಬನ ಬಗ್ಗೆ ಕನಿಕರದ ಮಾತು. ಇದಕ್ಕೇನು ಮುಟ್ಟಬೇಕು, ಮಾತೊಂದೇ ಸಲೀಸಾಗಿ ಬರುವುದು. ಮೂಗನಿಗೆ ಒಂದು ಗುಟ್ಟು ಹೇಳಿ. ತಕ್ಷಣ ಅವನಿಗೂ ಮಾತು ಬರುತ್ತದೆ. "ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಇನ್ನೇನಾಗುತ್ತದೆ" ಎಂಬ ಠರಾವು ಸರ್ವಾನುಮತದಿಂದ (ಗೋವಾದ ಬಗ್ಗೆ ಮಹಾರಾಷ್ಟ್ರದವರು ಅಸೆಂಬ್ಲಿಯಲ್ಲಿ ಅಂಗೀಕರಿಸಲಿಲ್ಲವೆ? ಹಾಗೆ) ಅಂಗೀಕೃತವಾಯಿತು ಯಾರ ಭಾವೀನೋ, ಕೆರೇನೋ, ಹಾಳುಭಾವಿಯೋ ಏನೋ, ಪಾಪ! ಅಂತ ಅಜ್ಜಮ್ಮನವರ ಕಣ್ಣಲ್ಲಿ ನೀರು ಬಂದುಬಿಡ್ತು. ಪತ್ತೆದಾರಿ ಕತೆ ಓದಿ Sherlock Holmes ಆಗುವ ಯೋಚನೆಯಿಂದ್ದ ಯುವಕರಂತೂ ಶೋಧನೆಗೆ ತೊಡಗಿದರು. ಯಾರು ಯಾರನ್ನೋ ಹಿಂಬಾಲಿಸಿ, ಅವರ ಕೈಲಿ ಬೈಸಿಕೊಂಡು ಸುಸ್ತಾದರು. ಪಾಪ ಅವರದ್ದೇನು ತಪ್ಪು. ಅವರಿಗೆ ಗೊತ್ತಿತ್ತೆ ಮಕ್ಕಳಿರುವ ಜಾಗ?

ಎಲ್ಲ ಭಿಕ್ಷುಕರ ಮೇಲೂ ಗುಮಾನಿ ಬಂದಿತ್ತು. ಅವರಿಗೆ ಭಿಕ್ಷೆ ಇಲ್ಲ ಅಂದು. ಅವರಿಗೆ ಒಂದು ಬಗೆಯ ಖುಷಿ, ಏಕೆಂದರೆ ಅಕ್ಕಳ್ಳು ತಪ್ಪಿತಲ್ಲ ಆ ದಿನವಾದರೂ ಎಂದು. ಎರಡು ಬೀಜ ನೆಟ್ಟು Urgent ಆಗಿ ಗಿಡ ಬೆಳೀಬೇಕು ಎಂದರೆ ಆಗುತ್ತದೆಯೋ? ಆದರೆ ನಿಮ್ಮ ಯೋಚನೆ, ಊಹೆ ಮಾತ್ರ ಬೆಳೆದಿರುತ್ತದೆ. ಅಡುಗೆ ಮನೆಯಿಂದ, ಹಜಾಮನ ಅಂಗಡಿಯವರಿವಿಗೂ ಇದೇ ಮಾತು. ಸ್ಕೂಲಿನಿಂದ ಕಚೇರಿಗಳವರಿವಿಗೂ ಇದೇ ಮಾತು.

"ಬಲಿ ಕೊಡುತ್ತಾರಂತೆ ಮಕ್ಕಳನ್ನು" ಎಂದರು ಒಬ್ಬರು. "ಅಯ್ಯೋ! ಸುಮ್ನಿರಿ ಈಗಿನ ಕಾಲದಲ್ಲಿ ಬಲಿ ಕೊಡೋಣಾ ಅಂಧರೇನು? ಅವರ ಕಾಲೋ.

ಕೈಯ್ಯೊ ಮುರಿದು ಭಿಕ್ಷುಕರು ಭಿಕ್ಷಾಟಣೆಗೆ ಉಪಯೋಗಿಸುತ್ತಾರೆ" ಎಂದರು ಇನ್ನೊಬ್ಬರು. ಚರಿತ್ರೆ ಮೇಷ್ಟ್ರು "ಗುಲಾಮರನ್ನಾಗಿ ಮಾಡುತ್ತಾರೆ" ಎಂದರು. ಕನ್ನಡ ಪಂಡಿತರಂತೂ "ಪಾಪ. ಇದು ಬಹಳ ಪಾಪ" ಎಂದರು. ಆದರೆ ಗಾಣಿಗಿತ್ತಿ ಅಯ್ಯೋ ಎಂದರೆ ನೆತ್ತಿ ತಣ್ಣಗಾಗುತ್ತೆ? ಮಕ್ಕಳು ಬರಲೇ ಇಲ್ಲ. ಇರುವ ಜಾಗ ಬಿಟ್ಟು ಎಲ್ಲ ಕಡೆಯೂ ಹುಡುಕಿದ್ದರು.

ದಫೇದಾರ್ ದೇರಣ್ಣೋರಂತೂ ಕಿಡಿಕಿಡಿಯಾಗಿದ್ದರು. "ನನ್ನ Service ನಲ್ಲೆ ಇಲ್ಲ ಇಂಥ ಕೇಸು" ಎಂದರು. ಅವರ Service ನಲ್ಲೇ ಕೇಳಿರಲಿಲ್ಲ. ದೇರಣ್ಣನವರಿಗೆ ಒಂದು Medal ಲು ತೊಗೊಳ್ಳುವ ಆಸೆ. ಶಪಥ ಮಾಡೇ ಬಿಟ್ಟರು. ರಿಟೈರ್ ಆಗೋ ಹೊತ್ತಿಗೆ ಹಿಡಿಯಲೇ ಬೇಕು ಎಂದು.

ಅಂತೂ ಎಲ್ಲರೂ ಸಜ್ಜಾಗಿದ್ದರು. ಊರಿಗೆ ಊರೇ ಮುಳ್ಳಿನ ಮೇಲೆ ನಿಂತಿತ್ತು. ಆಸಕ್ತಿಯಿಂದ ಅಂತ್ಯಕ್ಕೆ ಕಾಯುತ್ತಿದ್ದ ನನಗೆ ತಕ್ಷಣ ಹಿಂತಿರುಗಿ ಬರಲು telegram ಬಂತು. ವಾಪಸ್ಸು ಬಂದುಬಿಟ್ಟೆ.

ನಂತರ, ಮತ್ತೆ 3–4 ತಿಂಗಳಾದ ಮೇಲೆ ಹೋದಾಗ ನೇರವಾಗಿ ವೆಂಕೋಬ ನನ್ನೇ ಕೇಳಿದೆ. ವೆಂಕೋಬ ಹೇಳಿದ "ಮಾವನ ಮನೆಗೆ ಹೋಗಿದ್ದವು ಮುಂಡೇವು ಸಾರ್". ಕೇಳಿದ್ದಕ್ಕೆ "ಅಕ್ಕಳ್ಳು ತಿನ್ನೋದಕ್ಕೆ ನಮ್ಮ ಕೈಲಾಗಲಿಲ್ಲ" ಎಂದವು ಎಂದ.

—ಹೆಚ್. ಎನ್. ಆನಂದ.

ಪಾನನಿರೋಧ ಅಂತ ಎಗರಾಡ್ತಾರಲ್ಲಾ ಮೊರಾರ್ಜೀಭಾಯಿ–ಅವರಿಗೆ ಹೆಂಡ ಕುಡಿಸಿದರೆ ಇನ್ನೂ ಹೇಗೆ ಆಡ್ತಾರೋ? ಎಂದೊಬ್ಬರು ಕೇಳಿದ್ದಾರೆ.

—ಹೇಗೂ ಆಡುಲ್ಲ. ಥಂಡ ಆಗಿ ಸುಖವಾಗಿರ್ತಾರೆ!

* * * *

ಅರ್ಜೆಂಟ್ ಕೇಸಿಗೆ ಹೋಗಬೇಕು ಎಂದು ಡಾಕ್ಟರು ಹೊರಟುಹೋದರಂತೆ.

—ಕೇಸ್ ಆಫ್ ಸ್ಕಾಚ್ ಇರಬಹುದೇ?

* * * *

ನಿಖಿಲ್ ಹೇಳಿದ್ದು

ಬರೆದವರು :
ಶ್ರೀ. ದತ್ತ

★

ನನ್ನನ್ನು ಬೀಳ್ಕೊಡಲು ಬಸ್ ಸ್ಟಾಪಿನವರೆಗೆ ಬಂದಿದ್ದ ನಿಖಿಲ್, ಆಗಂದ ;—

" ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದಿನ ಮಾತು. ಅವತ್ತು ಕಗ್ಗತ್ತಲೆಯ ರಾತ್ರಿ. ಬೀದಿ ದೀಪಗಳು ಸತ್ತಿವೆ. ಕಪ್ಪನೆಯ ಕಂಬಳಿಯಂತೆ ಮೋಡ ಕವಿದಿದೆ. ಅಲ್ಲೊಂದು ಇಲ್ಲೊಂದು ಮಿಂಚು ಸುಳಿಯುತ್ತಿದೆ. ಕೂಡಲೇ ರೊಯ್ಯ್‌ನೆ ಗಾಳಿ, ನಂತರ ರಪರಪನೆ ಮಳೆ.

ಬಸವನಗುಡಿಯಲ್ಲಿ ಒಂದು ಮನೆ. ಅಲ್ಲಿ, ನಾಲ್ಕು ವರ್ಷದ ಮಗುವೊಂದು ಜ್ವರದಿಂದ ನರಳುತ್ತ ಬಿದ್ದಿದೆ, ತಾಯಿಯ ತೊಡೆಯ ಮೇಲೆ. ಅದರ ಮೈ ನಿಗಿನಿಗಿ ಕೆಂಡದಂತೆ ಸುಡುತ್ತಿದೆ. ಮಗುವಿನ ತಂದೆ ಯೋಚನಾಕ್ರಾಂತನಾಗಿ ಮೂಲೆಯಲ್ಲಿ ಕುಳಿತಿದ್ದಾನೆ.

" ರವಷ್ಟು ಹುಡುಗನ ಸ್ಥಿತಿ ನೋಡಿ—ಹೇಗೆ ನರಳ್ತಾಯಿದಾನೆ ? ಹೋಗಿ ಔಷಧಿ ತೊಗೊಂಡ್ಬನ್ನೀಂದ್ರೆ "—ಹೆಂಡತಿ ರಗಳೆ ಮಾಡಿದಳು.

ಗಂಡನು ಅದಾವುದೋ ಒಂದು ಅನಿಶ್ಚತೆಯಲ್ಲಿ ತೊಳಲಾಡುತ್ತಿರುವಂತೆ ಕಂಡಿತು. ಅಂದು ಬೆಳಿಗ್ಗೆ-ತಾನೆ ಮುಖಕ್ಷೌರ ಕಂಡ ನುಣುಪಾದ ಗಲ್ಲವನ್ನು ನೇವರಿಸುತ್ತ ಕಿಟಕಿಯಿಂದಾಚೆ ನೋಡಿದ. ಹೊರಗಡೆ ಒಂದಾದರೂ ವಾಹನದ ಸುಳಿವಿಲ್ಲ.

" ಈಗಲೇ ಹೋಗಬೇಕೆ ? ಬೆಳಿಗ್ಗೆ ಹೋದರೆ ಆಗುವುದಿಲ್ಲವೇ ? "

" ಏನು ಹೇಳೋದು ನಿಮಗೆ. ಇಷ್ಟರಮೇಲೆ ನಿಮ್ಮಿಷ್ಟ ಬಂದ್ಹಾಗೆ ಮಾಡಿ "

ಸರಿ. ಔಷಧಿ ಶೀಷೆ ತೆಗೆದುಕೊಂಡು, ಗಂಡ ಹೊರಬಿದ್ದ.

ಗಂಟೆ ಒಂದು ಬಡಿಯಿತು....ಎರಡು...ಮೂರು...ನಾಲ್ಕು...ಉದ್ಯಾನವನಗಳ ಸುಂದರ ನಗರದ ಮೇಲೆ ಸೂರ್ಯನು ತನ್ನ ಧವಳ ಪ್ರಕಾಶವನ್ನು ಬೀರಿದ. ಆದರೂ ಔಷಧಿ ತರಲು ಹೋದ ಗಂಡ ಮಾತ್ರ ಹಿಂತಿರುಗಿ ಬರಲಿಲ್ಲ. ಬರಲಿಲ್ಲ. ಬರಲೇ ಇಲ್ಲ.

ಪಕ್ಕದ ಮನೆಯವರು ಆಸ್ಪತ್ರೆಗೂ ಮನೆಗೂ ಓಡಾಡಿದರು. ಕಾಲಕ್ರಮೇಣ ಮಗು ಗುಣಮುಖವಾಯಿತು.

ದಿನಗಳುರುಳಿದವು, ತಿಂಗಳುಗಳು ಕಳೆದವು ; ವರ್ಷಗಳು ನೆಗೆದು ಬಿದ್ದುಹೋದವು. ಮಗು ಬೆಳೆದು ದೊಡ್ಡವನಾದ.

" ಔಷಧಿ ತರಲಿಕ್ಕೆ ಹೋದನಲ್ಲ. ಅವನ ಕಥೆ ಹೇಳಯ್ಯ. ಅವನೇನು ಬದುಕಿದನೋ, ಖರ್ಚಾದನೋ ? "–ನಾನು ಮಧ್ಯೆ ಬಾಯಿ ಹಾಕಿದೆ ಸ್ವಲ್ಪ ತಾಳ್ಮೆ ತಪ್ಪಿ.

ಕೇಳಿದರೂ ಕೇಳದವನಂತೆ ಮುಂದುವರಿಸಿದ ನಿಖಿಲ್.

" ಪ್ರಾಯಕ್ಕೆ ಬಂದ ಮಗನಿಗೆ ತಾಯಿ, ಹೆಣ್ಣೊಂದನ್ನು ಹುಡುಕಿ ವಿಜೃಂಭಣೆಯಿಂದ ಮದುವೆ ಮಾಡಿದಳು. ಸೊಸೆ ಮನೆಗೆ ಬಂದದ್ದೂ ಆಯಿತು. ನಂತರ ಅವರಿಗೊಂದು ಮಗು.

ಅದೊಂದು ಕರಾಳ ರಾತ್ರಿ! ಮಳೆ ಜಡಿಯುತ್ತಿದೆ; ಸಿಡಿಲು ಥಳಿಸುತ್ತಿದೆ!! ಆ ಮಗುವಿಗೆ ಉತ್ಪಾತ ಜ್ವರ !!!

" ಹೇಳಿದ ಕಥೇನೆ ಹೇಳ್ತಿದೀಯಲ್ಲಯ್ಯ " ನಾನು ಶಾಂತಸ್ವರದಲ್ಲಿ ಸಿಡುಕಿನ ಮಾತನ್ನೇ ಆಡಿದೆ.

ಏರಿದ ಧ್ವನಿಯಲ್ಲಿ ನಿಖಿಲ್ ಹೇಳಿದ.

ಸೊಸೆ ತನ್ನ ಗಂಡನನ್ನು ಪೀಡಿಸಿದಳು—" ಅಯ್ಯೋ ಹೋಗ್ರೀಂದ್ರೆ! Medicine ತೊಗೊಂಡ್ ಬನ್ನೀ "

" ಬೇಡ ಮಗನೆ, ಖಂಡಿತ ನೀನು ಈ ಹೊತ್ತಿನಲ್ಲಿ ಹೋಗೋದು ಬೇಡ "— ತಾಯಿಯ ಅಡ್ಡ ಮಾತು.

" ಇದೇನು ಅತ್ತೆ, ನೀವು ಹೀಗೆ ಮಾತಾಡ್ತಾಯಿದೀರ ? ಇವರು ಯಾಕೆ ಹೋಗ್ಬಾರ್ದು ಈಗ ..ಇನ್ನೂ ಪುಟ್ಟ ಕೂಸೆ ಅವರು ? "

ಅಷ್ಟರಲ್ಲಿ—

ಟಪ್...ಟಪ್...ಟಪ್. ಹೊರಗಡೆ ಬಾಗಿಲ ಸದ್ದು.

" ಯಾರು ಈ ಹೊತ್ತಿನಲ್ಲಿ ? " ಎಂದು ಕೇಳುತ್ತ ಮಗ ಬಾಗಿಲು ತೆಗೆದ.

ಹರಕು ಬಟ್ಟೆ ತೊಟ್ಟು, ಮಾರುದ್ದ ಗಡ್ಡದ ಆಸಾಮಿಯೊಬ್ಬನು ಕೈಯಲ್ಲಿ ಶೀಷೆ ಹಿಡಿದುಕೊಂಡು ಬಾಗಿಲ ಚೌಕಟ್ಟಿನಲ್ಲಿ ನಿಂತಿದ್ದಾನೆ! ಒಂದು ನಿಮಿಷ ಎಲ್ಲರೂ ದಿಗ್ಭ್ರಾಂತರಾಗಿ ಅವನನ್ನೆ ನೋಡಿದರು.

" ಅಯ್ಯೋ! ನೀವೇ ?! " ತಾಯಿ ಗುರುತಿಸಿ, ಕಿರುಚಿದಳು. " ಎಲ್ಲಿಗೆ ಹೋಗಿದ್ರೀ ಇಷ್ಟು ವರ್ಷ ?......ಏನ್ಮಾಡ್ತಾಯಿದ್ರೀ ? "

" ಅಯ್ಯೋ ಯಾಕೆ ಹಾಗೆ ಎಗರ್‍ತಾಡ್ತೀಯೋ. . ಬೆಂಗಳೂರಲ್ಲಿ ಇನ್ನೇನು ಮಾಡುಕ್ಕೆ ಆಗುತ್ತೇ, ಕೊಂಚ ಸಿಟಿ ಬಸ್ಸಿಗೆ wait ಮಾಡ್ತಾಯಿದ್ದೆ ಅಷ್ಟೆ " ಎಂದು ಹೇಳುತ್ತಾ ಔಷಧಿ ಶೀಷೆಯನ್ನು ಅವಳ ಕೈಗೆ ಕೊಟ್ಟ.

ಕಥೆ ಮುಗಿಸಿದ ನಿಖಿಲ್ ನನ್ನನ್ನೇ ದುರುದುರು ನೋಡಿದ. ಬಸ್ಸಿಗಾಗಿ ಕಾಯುತ್ತಿದ್ದ ನಾನು, ದಾರಿಯುದ್ದಕ್ಕೂ ನೋಡುತ್ತ ಹಾಗೇ ಮೇಲೆ ಕಣ್ಣು ಹಾಯಿಸಿದೆ. ಆಗಲೇ ಆಕಾಶದಲ್ಲಿ ಮೋಡಗಳು ಕೂಡತೊಡಗಿದ್ದವು! ಬಸ್ ಬರುವವರೆಗೂ ನನಗೆ ಜೊತೆಗೂಡಲು ನಿಂತಿದ್ದ ನಿಖಿಲ್‌ಗೆ " ನಮಸ್ಕಾರ, ಬರುತ್ತೇನೆ " ಎಂದು ಹೇಳಿ ಬಸ್ ಸ್ಟಾಪಿನಿಂದ ಮನೆಯ ಕಡೆಗೆ ಸರಸರ ಕಾಲುಹಾಕಿದೆ.

ಸಾಪೇಕ್ಷತಾ ಸಿದ್ಧಾಂತ

"ಹಾಯಲ್ ನಾಲೀಕರ್ ಭಾಷಣಕ್ಕೆ ಹೋಗಿದ್ದಿರೇನ್ರೀ?" ಅಂತ ಕೇಳಿದರು—ಬಾಳೇಕಾಯಿ ಬಜೆ.

ಅವರು ಯಾರನ್ನೂ ಉದ್ದೇಶಿಸಿ ಮಾತನಾಡಲಿಲ್ಲವಾದರೂ, ನಮ್ಮ ವಿರಾಟ ಭವನದಲ್ಲಿ ಇಂತಹ ಪ್ರಶ್ನೆಗಳು ಉತ್ತರವಿಲ್ಲದೆ ಹಾಳಾಗುವುದಿಲ್ಲ.

"ಹಾಯಲ್ ನಾರ್ಲಿಕರ್ ಅಂದರೆ ಯಾರ್ರೀ? ಆತ ಒಬ್ಬನಲ್ಲ—ಇಬ್ಬರು ರೀ! ಪ್ರೊಫೆಸರ್ ಹಾಯಲ್ ಬೇರೆ. ಪ್ರೊಫೆಸರ್ ನಾರ್ಲಿಕರ್ ಬೇರೆ!" ಅಂತ ತಿದ್ದಿದರು ಓಂಪುಡಿ.

"ನನ್ನ ತಮ್ಮನ ಸ್ನೇಹಿತನ ತಮ್ಮ-ಹಳೇ ಇಂಟರ್ ಫೇಲು-ಅವರ ಭಾಷಣಕ್ಕೆ ಹೋಗಿದ್ದನಂತೆ. ಮರುದಿನ ನಮ್ಮ ಮನೆಗೆ ಬಂದಿದ್ದ, ನನ್ನ ತಂಗಿಯ ಮಗನ ಬುಗುರಿ ತೆಗೆದುಕೊಂಡು ಅದನ್ನು ಆಡಿಸಿ, ನಾರ್ಲಿಕರ್ ಭಾಷಣದ ಪರಿಚಯ ಮಾಡಿ ಕೊಟ್ಟ." ಅಂದರು ಚೌ. ಚೌ.

"ಅಂದರೆ ನಾರ್ಲಿಕರ್ ತಮ್ಮ ಭಾಷಣದಲ್ಲಿ ಬುಗುರಿ ಆಡಿಸಿದ್ದರೇನು?" ಖಾರಾಬೂಂದಿ ಕೇಳಿದರು.

ಆಡೋದೇಕೆ ಬೇಕರಿ? ಬುಗುರಿ ಆಡಿದಹಾಗೆ! ಅಂತ ಹೋಲಿಸಿದರೆ ತಿಳಿಯೋಲ್ವೆ? ನಾವೆಲ್ಲಾ ಬುಗುರಿ ಆಡಿಲ್ವೆ?" ಚೌ ಚೌ ಕೇಳಿದರು.

"ಅದಿರಲ್ರೀ—ನಾರ್ಲಿಕರ್ ಬುಗರಿ ವಿಷಯದಲ್ಲಿ ಏನು ಹೇಳಿದರು?" ಮದ್ದೂರು ವಡೆ ಪ್ರಶ್ನಿಸಿದರು.

"ಅವರು ಬುಗರಿ ಬಗ್ಗೆ ಏನೂ ಹೇಳಲಿಲ್ಲ. ಸಾಪೇಕ್ಷತೆ ಅಥವಾ ರಿಲೆಟಿವಿಟಿ ಬಗ್ಗೆ ಒಂದು ಹೊಸ ಸಿದ್ಧಾಂತವನ್ನು ವಿವರಿಸಿದರು." ಅಂದರು ಓಂಪುಡಿ.

ನಮ್ಮ ವಿರಾಟಭವನದ ಬಳಗದವರಲ್ಲೆಲ್ಲಾ ಹೆಚ್ಚು ತಿಳುವಳಿಕಸ್ತರು ಅಂತ ತಿಳಿದುಕೊಂಡಿರುವರು.—ಓಂಪುಡಿ.

"ಸಾಪೇಕ್ಷತೆ ಅಂದರೆ ಏನಂತೆ?" ಅಂತ ಮೂಲಕ್ಕೇ ಗುರಿಯಿಟ್ಟು ಕೇಳಿದರು ಮದ್ದೂರು ವಡೆ.

ವಿರಾಟಭವನವೆಲ್ಲಾ ನಿಶ್ಶಬ್ದವಾಯ್ತು.

ತಮ್ಮ ಸ್ಟ್ರಾಂಗ್ ಕಾಫಿಯ ಕೊನೆಯ ಗುಟುಕು ಕುಡಿದು ನಮ್ಮ ಕಡೆ ತಲೆ ಎತ್ತಿದರು–ಮಲ್ಹಾರಿರಾಯರು.

"ಇವತ್ತು ಅಪರೂಪಕ್ಕೆ ನಮ್ಮ ಸಭೆ ವಿಜ್ಞಾನದ ಕಡೆ ಗಮನ ಹೊರಳಿಸಿದ ಹಾಗಿದೆ." ಅಂದರು.

"ಮೊನ್ನೆ ಪ್ರೊಫೆಸರ್ ನಾರ್ಲೀಕರ್ ಬಂದಿದ್ದರಲ್ಲಾ — ಅವರು ಮತ್ತು ಹಾಯಲ್ ಇಬ್ಬರೂ ಸೇರಿ ಗೆಲಿಲಿಯೋ, ನ್ಯೂಟನ್, ಐನ್‌ಸ್ಟೀನ್ ಇವರುಗಳ ಸಿದ್ಧಾಂತಗಳನ್ನು ಮೀರಿಸಿ ತಮ್ಮದೇ ಆದ ಹೊಸ ಸಿದ್ಧಾಂತವನ್ನು ಕಲ್ಪಿಸಿದ್ದಾರಂತಲ್ಲಾ—ಅದರ ಬಗ್ಗೆ ಮಾತನಾಡುತ್ತಿದ್ದೆವು." ಅಂದರು ಓಂಪುಡಿ.

ಸ್ವಲ್ಪ ಅಹಂಭಾವದ ವ್ಯಕ್ತಿಯಾದರೂ, ಸಮಯದಲ್ಲಿ ಉಚಿತವಾಗಿ ಮಾತನಾಡಬಲ್ಲವರು—ಓಂಪುಡಿ ಎಂದು ನಾವು ಒಪ್ಪಿಕೊಳ್ಳಲೇಬೇಕು.

"ಆದರೆ ಅದೇನೋ ಬುಗುರಿ ವಿಷಯ ಬಂದ ಹಾಗಿತ್ತಲ್ಲ!" ಅಂದರು ಮಲ್ಹಾರಿರಾಯರು.

"ನನ್ನ ತಮ್ಮನ ಸ್ನೇಹಿತನ ತಮ್ಮ. ಹಳೇ ಕಾಲದ ಇಂಟರ್ ಫೇಲು—ನಾರ್ಲೀಕರ್ ಅವರ ಭಾಷಣ ಕೇಳಿ ನಮ್ಮಲ್ಲಿಗೆ ಮರುದಿನ ಬಂದಿದ್ದ. ನನ್ನ ತಂಗಿಯ ಮಗನ ಬುಗುರಿ ಆಡಿಸಿ ಸಾಪೇಕ್ಷತಾ ಸಿದ್ಧಾಂತವನ್ನು ವರ್ಣಿಸಿದ. ಆದರೆ ಅವನಿಗೆ ಬುಗುರಿ ಆಡಿಸಲಿಕ್ಕೂ ಬರ್ಲಿಲ್ಲ. ನಮಗೆ ಸಪೇಕ್ಷತಾ ಸಿದ್ಧಾಂತ—ಅರ್ಥವೂ ಆಗಲಿಲ್ಲ." ಅಂದರು ಚೌ ಚೌ.

"ನನಗೇನೋ ಅಷ್ಟಾಗಿ ಈ ಸಾಪೇಕ್ಷತಾ ಸಿದ್ಧಾಂತ. ಕ್ವಾಂಟಂ ಥಿಯರಿ—ಇಂಥಾದ್ದರಲ್ಲಿ ನಂಬಿಕೆ ಇಲ್ಲ—ಅಥವಾ ಇರಲಿಲ್ಲ. ಆದರೆ ನನ್ನ ಭಾವನ ಸೋದರಳಿಯ ರಾಧಾಕೃಷ್ಣ—ತಾನು ಕಾಲೇಜು ಹಾಸ್ಟಲಿನಲ್ಲಿದ್ದಾಗ ತಾನು ಕಣ್ಣಾರೆ ಕಂಡ ಅನುಭವ ಕೇಳಿದ ಮೇಲೆ ನನ್ನ ಅಪನಂಬಿಕೆಯನ್ನು ಸಡಲಿಸಬೇಕಾಯ್ತು." ಅಂದರು.

ಇದನ್ನು ಕೇಳಿ ನಮ್ಮೆಲ್ಲರ ಕುತೂಹಲವೂ ಕೆರಳಿತು. ಸಾಧಾರಣ ವಿಷಯಗಳೇ ಮಲ್ಹಾರಿರಾಯರ ಕಲ್ಪನೆಯಲ್ಲಿ ಅಸಾಧಾರಣವಾಗಬಲ್ಲವು. ಹಾಗಿರುವಾಗ ಸಾಪೇಕ್ಷತಾ ಸಿದ್ಧಾಂತದಂತಹ ಮಹತ್ತರವಾದ ವಿಷಯವನ್ನು ಮಲ್ಹಾರಿರಾಯರ ಬಾಯಿಂದ ಕೇಳಲು ನಾವೆಲ್ಲರೂ ಕುತೂಹಲಪಟ್ಟಿದ್ದು ಆಶ್ಚರ್ಯವೇನಿಲ್ಲ.

ನಮ್ಮ ಭಾವನ ಸೋದರಳಿಯ ರಾಧಾಕೃಷ್ಣ (ಮಲ್ಹಾರಿರಾಯರು ಮುಂದುವರಿದರು) ಆಗ ಸೆಂಟ್ರಲ್ ಕಾಲೇಜಿನಲ್ಲಿ ಬಿ. ಎಸ್ಸಿ. ಎರಡನೇ ವರ್ಷದಲ್ಲಿ ಓದುತ್ತ, ಅದೇ ಹಾಸ್ಟಲಲ್ಲಿದ್ದ. ಅವರ ಜೊತೆ, ಒಂದೇ ರೂಮಿನಲ್ಲಿ ಸೋಮನಾಥ-ಮೊದಲನೇ ವರ್ಷ ಬಿ. ಎಸ್ಸಿ. ಹುಡುಗನೂ ಇದ್ದ. ಒಂದು ರೂಮಿನಲ್ಲಿ ಇಬ್ಬರು ತಾನೆ?

ಒಂದು ಬಾರಿ ಸೋಮನಾಥನ ಚಿಕ್ಕಪ್ಪನ ಮಕ್ಕಳು ಭೀಮ, ವೆಂಕು ಇಬ್ಬರು ಬೆಂಗಳೂರಿಗೆ ಬಂದವರು, ಅದೇ ರೂಮಿನಲ್ಲಿ ಇಳಿದುಕೊಂಡಿದ್ದರಂತೆ. ಸೋಮನಾಥನ ಚಿಕ್ಕಪ್ಪ ಇದ್ದುದು ಹಾಸನದಲ್ಲಿ. ಭೀಮ, ವೆಂಕು-ಅಣ್ಣ ತಮ್ಮಂದಿರಾದರೂ, ಭೀಮ ಸ್ವಲ್ಪ ಕುಳ್ಳ ಆದರೆ ದಪ್ಪ. ವೆಂಕು ಎತ್ತರದ ಆಳು ಆದರೆ ಸಣ್ಣ. ಬೆಂಗಳೂರಿಗೆ ಬಂದವರು-ಇಬ್ಬರೂ ಒಂದೇ ತರಹದ ಬಟ್ಟೆಯಲ್ಲಿ ಒಂದೇ ತರಹ ಕೋಟುಗಳನ್ನು ಹೊಲಿಸಿಕೊಂಡರು. ಅವು ದರ್ಜಿ ಇಂದ ಬಂದ ದಿನ ಇಬ್ಬರೂ ಧರಿಸಿ, ಪೇಟೆಯೆಲ್ಲಾ ಸುತ್ತಾಡಿ, ರಾತ್ರಿ ಷೋ ಕಿತ್ತೂರು ಚೆನ್ನಮ್ಮ ಸಿನಿಮಾ ನೋಡಿಕೊಂಡು ಬಂದು, ತಮ್ಮ ಕೋಟುಗಳನ್ನು ಬಿಚ್ಚಿ, ಪಕ್ಕ ಪಕ್ಕದಲ್ಲಿ ಗೂಟಗಳಿಗೆ ನೇತು ಹಾಕಿ ಊಟಮಾಡಿ ಮಲಗಿದರು.

ಮಾರುದಿನ ಎದ್ದವರೇ ತಮ್ಮ ಸ್ನಾನಾದಿಗಳನ್ನು ತೀರಿಸಿಕೊಂಡು, ತಮ್ಮ ತಮ್ಮ ಕೋಟುಗಳನ್ನು ಧರಿಸಿ ಬಹಳ ಸಲೀಸಾಗಿ ಆರಾಮವಾಗಿ ನಡೆದುಹೋಗಿದ್ದವರು, ಅದೇಕೋ ಈಗ ಅವರ ಕೋಟುಗಳು ವಿಪರೀತ ತಾಪತ್ರಯ ಮಾಡಹತ್ತಿದ್ದವು. ಅಣ್ಣ-ಭೀಮ ಧರಿಸಿದ್ದ ಕೋಟು ಅವನ ಮೊಣಕಾಲುಗಳವರೆಗೂ ಇಳಿದಿತ್ತು. ಆದರೆ ಗುಂಡಿ ಹಾಕುವ ಕಡೆ ಸುಮಾರು ಅರ್ಧ ಅಡಿ ಬಾಯಿ ಬಿಟ್ಟಿತ್ತು. ತಮ್ಮ ವೆಂಕು ಧರಿಸಿದ್ದ ಕೋಟು-ಅವನ ಎದೆ ಅಂಚಿಗೆ ಸ್ವಲ್ಪ ಕೆಳಗಿತ್ತು. ಆದರೆ ಗುಂಡಿ ಹಾಕಿದಾಗ ಕೋಟಿನೊಳಗೆ ಒಂದು ಸಣ್ಣ ಆನೆಯನ್ನು ಸೇರಿಸಿಕೊಳ್ಳಬಹುದಾಗಿ ತೋರುತ್ತಿತ್ತು. ಭೀಮ, ವೆಂಕು-ತಮ್ಮ ಕೋಟುಗಳ ಬಗ್ಗೆ ಅಷ್ಟಾಗಿ ಯೋಚಿಸಲಿಲ್ಲ. ಹೊಸ ಕೋಟುಗಳು-ಪ್ರಾಯಶಃ ಇನ್ನೂ ತಮಗೆ ಅಭ್ಯಾಸವಾಗಿಲ್ಲ ಅಂತ ಸುಮ್ಮನಿದ್ದರು. ಆದರೆ ದಾರಿಯಲ್ಲಿ ಹೋಗುತ್ತಿದ್ದವರಲ್ಲಿ ಕೆಲವರು ತಮ್ಮನ್ನೇ ದೃಷ್ಟಿಸಿ ನೋಡುತ್ತಿದ್ದುದರಿಂದ ತಮ್ಮಲ್ಲಿ ಏನೋ ನ್ಯೂನತೆ ಇರಬೇಕೆಂದು ಅನುಮಾನಪಟ್ಟರು. ಹಾಗೂ ಹೀಗೂ ಪೇಟೆಯಲ್ಲಿ ತಮ್ಮ ಕೆಲಸಗಳನ್ನು ಮುಗಿಸಿದವರು, ಹಾಸ್ಟಲಿನ ರೂಮು ಸೇರಿದೊಡನೆಯೇ ತಮ್ಮ ಕೋಟುಗಳನ್ನು ಬಿಚ್ಚಿ, ಸರಿಯಾಗಿ ಮಡಿಸಿ ತಮ್ಮ ಟ್ರಂಕುಗಳಲ್ಲಿ ಸೇರಿಸಿದರು.

ಆದರೆ ತಮ್ಮ ಕೋಟುಗಳ ಬಗ್ಗೆ ಎಷ್ಟು ಯೋಚಿಸಿದರೂ, ಅವರಿಬ್ಬರ ಬಗೆ ಹರಿಯಲಿಲ್ಲ. ಕೋಟುಗಳನ್ನು ಹೊಲಿದ ದರ್ಜಿಯನ್ನು ದೂಷಿಸುವ ಹಾಗೇ ಇರಲಿಲ್ಲ. ಏಕೆಂದರೆ—ಹಿಂದಿನ ದಿನ ಅದೇ ಕೋಟುಗಳು ಅವರಿಗೆ ಸರಿಯಾಗಿ ಒಪ್ಪಿತ್ತು. ಇನ್ನು ಬಟ್ಟೆ ಏನಾಗಿರಬಹುದು ? ಅದನ್ನು ನೀರಿಗೆ ಹಾಕಿದರೂ ಷ್ರಿಂಕಾಗೊಲ್ಲ ಅಂತ ಗ್ಯಾರಂಟಿ ಇದ್ದ ಬಟ್ಟೆ. ಹಾಗೂ—ನೀರಿನ ಸ್ಪರ್ಶಕೂಡ ಆ ಕೋಟುಗಳಿಗಾಗಿರಲಿಲ್ಲ. ಬೆಂಗಳೂರಲ್ಲಿ ತಿಂಗಳುಗಟ್ಟಳೆ ಮಳೆ ಇರಲಿಲ್ಲ. ಏನಾಯ್ತು ? ಒಂದು ವೇಳೆ ಹಿಂದಿನ ರಾತ್ರಿ ರೂಮಿನೊಳಗೆ ಭೂತ ಯಾವುದಾದರೂ ನುಗ್ಗಿ— ಆ ಕೋಟುಗಳನ್ನು ಧರಿಸಿ ಆ ರೀತಿ ಬದಲಾಯಿಸಿರಬಹುದೆ ? ಅಥವಾ ಈಗೀಗ ಅದೇನೋ ನಾಲ್ಕನೇ ಐದನೇ ಡೈಮನ್‌ಷನ್, ಗುರುತ್ವಾಕಾಂಕ್ಷೆ ಅಂತ ಹೇಳ್ತಾರಲ್ಲಾ

ಆ ಜಾಡ್ಯವೇನಾದರೂ ಈ ಕೋಟುಗಳಿಗೆ ಅಂಟಿಕೊಂಡಿತೇ—ಅಂತ ಘಂಟೆ ಗಟ್ಟಲೆ ಯೋಚಿಸಿದರು. ಯಾವುದೂ ನಿರ್ಧಾರವಾಗಲಿಲ್ಲ. ಪುನಃ ಆವತ್ತು ಅವರು ಹೊಸ ಕೋಟುಗಳನ್ನು ಧರಿಸಲೇ ಇಲ್ಲ. ಸಂಜೆ ತಮ್ಮ ಹಳೇ ಕೋಟುಗಳನ್ನು ಧರಿಸಿ, ಪೇಟೆ ತಿರುಗಾಡಿಕೊಂಡು ಬಂದರು. ಮಾರುದಿನವೇ ಅವರಿಬ್ಬರೂ ಹಾಸನಕ್ಕೆ ವಾಪಸು ಹೊರಡುವವರಾದ್ದರಿಂದ ಹೊಸ ಕೋಟುಗಳನ್ನು ಟ್ರಂಕಿನಿಂದ ಹೊರ ತೆಗೆಯಬೇಕಾಗಿರಲಿಲ್ಲ. ಅಲ್ಲೇ ಇದ್ದವು.

ರಾತ್ರಿ ಊಟವಾದ ಮೇಲೆ ಮಲಗುವ ಮುಂಚೆ ಅದೂ ಇದೂ ಮಾತನಾಡು ತ್ತಿದ್ದಾಗ, ವೆಂಕು ಸೋಮನಾಥನ ಮುಂದೆ ನಡೆದ ವಿಷಯ ಹೇಳಿದನಂತೆ. ಪಕ್ಕ ದಲ್ಲೇ ಕುಳಿತಿದ್ದ ರಾಧಾಕೃಷ್ಣನಿಗೆ ಅದನ್ನು ಕೇಳಿ ಆದ ಆಶ್ಚರ್ಯ ಅಷ್ಟಿಷ್ಟಲ್ಲವಂತೆ.

"ಎಲ್ರೀ ವೆಂಕು, ಆ ಕೋಟುಗಳನ್ನ ನೋಡಿಯಾದರೂ ನೋಡೋಣ— ಹೊರಗೆ ತೆಗೀರ್ರೀ!" ಅಂದ ರಾಧಾಕೃಷ್ಣ.

"ಹೌದೋ ಭೀಮು, ತೆಗಿಯೋ ನೋಡೋಣ—ಅವಕ್ಕೆ ಏನು ದೆವ್ವ ಹತ್ತಿದೆ ನೋಡೋಣ!" ಅಂದ ಸೋಮನಾಥ.

ಭೀಮು, ವೆಂಕು ತಮ್ಮ ಕೋಟುಗಳನ್ನು ಹೊರಕ್ಕೆ ತೆಗೆದು, ಮಡಿಕೆಗಳನ್ನು ಹುಷಾರಾಗಿ ಬಿಚ್ಚಿ, ಚೆನ್ನಾಗಿ ಕೊಡವಿ, ಲೈಟಿನ ಬೆಳಕಿನಲ್ಲಿ ಪರೀಕ್ಷೆಗಿಟ್ಟರು. ನಾಲ್ವರೂ ಚೆನ್ನಾಗಿ ಪರೀಕ್ಷೆ ನಡೆಸಿದರು. ಏನೊಂದು ವಿಚಿತ್ರವೂ ಕೋಟುಗಳಲ್ಲಿ ಕಾಣಲಿಲ್ಲ.

"ಎಲ್ರೋ ಹಾಕ್ಕೊಳ್ರೋ ನೋಡೋಣ" ಅಂದ ಸೋಮನಾಥ.

ಭೀಮು, ವೆಂಕು ಅನುಮಾನಿಸಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಹೆದರಬೇಡ್ರೀ—ನಾನು ಸೋಮು ಇದ್ದೇವೆ. ಏನಾದರೂ ನೋಡಿ ಕೊಳ್ಳು ತ್ತೇವೆ." ಅಂತ ಧೈರ್ಯ ಕೊಟ್ಟ ರಾಧಾಕೃಷ್ಣ.

ಅಣ್ಣತಮ್ಮಂದಿರು ತನ್ನ ತನ್ನ ಕೋಟುಗಳನ್ನ ಧರಿಸಿದರು.

"ಏನಾಗಿದೆಯೋ—ಸರಿಯಾಗಿದೆಯಲ್ರೋ!" ಅಂದ ಸೋಮನಾಥ.

"ಹೌದ್ರೀ—ಎ ಒನ್ (A I) ಆಗಿದೆಯಲ್ರೀ!" ಅಂದ ರಾಧಾಕೃಷ್ಣ.

ಭೀಮು–ವೆಂಕು ಆಶ್ಚರ್ಯ ಚಕಿತರಾಗಿ ಮೂಕರಾಗಿ ನಿಂತರು.

ನಿಜವಾಗಿ ಹೇಳೋದಾದ್ರೆ—ಪ್ರಪಂಚ ಹುಟ್ಟಿದಾಗಿನಿಂದ ಯಾವ ದರ್ಜಿಯೂ ತನ್ನ ಯಾವ ಗಿರಾಕಿಗೂ ಇಷ್ಟು ನಾಜೂಕಾಗಿ ಕೋಟುಗಳನ್ನ ತಯಾರುಮಾಡಿರಲಾರ. ಅಷ್ಟು ಚೆನ್ನಾಗಿ ಒಪ್ಪುತ್ತಿದ್ದವು. ಪುನಃ ಅಂದು ರಾತ್ರಿ ಭೀಮು, ವೆಂಕು ತಮ್ಮ ಕೋಟುಗಳನ್ನ ಬಿಚ್ಚಲಿಲ್ಲ. ಅವುಗಳನ್ನು ಧರಿಸಿಯೇ ಮಲಗಿದರು. ಮಾರುದಿನ ಬೆಳಿಗ್ಗೆ ಎದ್ದು, ಹಾಸನದ ಕಡೆ ಪ್ರಯಾಣ ಬೆಳೆಸಿದರು.

" ನನಗೀಗನ್ನಿಸುತ್ತೆ—" ಮಲ್ಹಾರಿರಾಯರು ಮುಂದುವರಿದು ಹೇಳಿದರು. "ಇಂತಹ ಒಂದು ಘಟನೆ ನಡೆದಾಗ ಪ್ರೊಫೆಸರ್ ನಾರ್ಲೀಕರ್ ಅಂತಹ ವಿಜ್ಞಾನಿ ಎದುರಿಗಿದ್ದಿದ್ದರೆ, ಆತನ ಜ್ಞಾನ ಭಂಡಾರಕ್ಕೆ ಮತ್ತು ಅದರಿಂದ ಪ್ರಪಂಚಕ್ಕೆ ಎಷ್ಟು ಪ್ರಯೋಜನವಾಗುತ್ತಿತ್ತು ? "

ನಮ್ಮಲ್ಲಿ ಯಾರಿಗೂ ಏನೂ ಹೇಳಲು ತೋಚಲಿಲ್ಲ. ವಿಷಯ ನಮ್ಮೆಲ್ಲರ ಬುದ್ಧಿಶಕ್ತಿಯ ಮಟ್ಟವನ್ನು ಮೀರಿತ್ತು. ಓಂಪುಡಿ ಕೂಡ ತೆಪ್ಪಗಿದ್ದರು. ಆದರೆ ಇದುವರೆವಿಗೂ ತಂಟಿಪಿಟಕ್ಕನ್ನದೆ ಮಲ್ಹಾರಿರಾಯರ ಮಾತನ್ನು ಕೇಳುತ್ತಿದ್ದ ಪರಶು ಸುಮ್ಮನಿರಲಿಲ್ಲ.

" ರಾಯರೇ—ಒಂದು ವೇಳೆ-ಮಸಲ—ಆ ರಾತ್ರಿ-ಅಣ್ಣ ತಮ್ಮಂದಿರಿಬ್ಬರೂ ಕಿತ್ತೂರು ಚೆನ್ನಮ್ಮ ಸಿನಿಮಾ ನೋಡಿಬಂದ ರಾತ್ರಿ—ಅವರಿಬ್ಬರ ಕೋಟುಗಳು ಅದುಲು ಬದಲಾಗಿರಬಾರದೇಕೆ ? " ಅಂತ ಕೇಳಿಯೇ ಬಿಟ್ಟ.

ಸಭೆಯ ಮಧ್ಯದಲ್ಲಿ ಒಂದು ಬಾಂಬ್ ಬಿದ್ದ ಹಾಗಾಯ್ತು !

" ಛೇ ! ಇಂತಹ ಸುಲಭವಾದ ವಿವರಣೆಗೆಲ್ಲಾ ಈ ಪ್ರಸಂಗ ಒಳಪಟ್ಟಿರಲಿಲ್ಲ. ನಮ್ಮ ರಾಧಾಕೃಷ್ಣನಿಗೆ ಆಗಲೇ ಇದು ಹೊಳೆದಿತ್ತಂತೆ. ಆದರೆ ಆ ರೀತಿ ಆಗಲು ಆಸ್ಪದವೇ ಇರಲಿಲ್ಲವಂತೆ. ಅಲ್ಲಿ ಇದ್ದದ್ದು ನಾಲ್ಕೇ ಗೂಟಗಳು. ಅದರಲ್ಲಿ ಮೊದಲ ಎರಡು ಗೂಟಗಳಲ್ಲಿ ರಾಧಾಕೃಷ್ಣ ಮತ್ತು ಸೋಮನಾಥ—ಕ್ರಮವಾಗಿ ತಮ್ಮ ಬುಷ್ ಕೋಟುಗಳನ್ನು ನೇತುಹಾಕಿದ್ದರಂತೆ. ಉಳಿದೆರಡು ಗೂಟಗಳಲ್ಲಿ ಮೂರನೆಯ ಗೂಟಕ್ಕೆ ಅಣ್ಣನೂ ಈ ಕಡೆ ಕೊನೆಯ ಗೂಟಕ್ಕೆ ತಮ್ಮನೂ ತನ್ನ ತನ್ನ ಕೋಟನ್ನು ನೇತುಹಾಕಿದ್ದರಂತೆ. ಈ ನಾಲ್ವರಲ್ಲದೆ ಅಂದು ರಾತ್ರಿ ಕೋಣೆಗೆ ಮತ್ಯಾರೂ ಪ್ರವೇಶಿಸಬೇಕಾಗಿಲ್ಲವಂತೆ. ಆದ್ದರಿಂದ—ಕೋಟುಗಳು ಅದುಲುಬದುಲಾಗಿರಬಹುದೆಂಬ ಅನುಮಾನವೇ ಬೇಡ." ಅಂದರು ಮಲ್ಹಾರಿರಾಯರು.

" ಮತ್ತೇನಾಗಿರಬಹುದ್ರೀ ? " ಬಾಳೇಕಾಯಿ ಬಜೆ ಕೇಳಿದರಾ.

" ಬೇರೆ ಏನು ? ಯಾರಿಗೆ ಗೊತ್ತು ? ಉದ್ದ, ಅಗಲ ಎತ್ತರ-ಈ ಮೂರು ಅಳತೆಗಳನ್ನೂ ಮೀರಿ, ನಾಲ್ಕನೇ ಐದನೇ ಅಥವಾ ಆರನೇ ಅಳತೆಗಳ ಪ್ರಭಾವಕ್ಕೆ ಆ ಕೋಟುಗಳು ಒಳಪಟ್ಟಿರಬೇಕು ಅಷ್ಟೆ ! ಅಥವಾ ಅದೇನೋ ಹೇಳ್ತಾರಲ್ಲಾ-ಗ್ರಾವಿಟೇಷನ್ ಅಂತ-ಅದರ ಪ್ರಭಾವವೋ—ಆ ದೇವರಿಗೇ ಗೊತ್ತು. ಅಂದು ಪ್ರೊಫೆಸರ್ ನಾರ್ಲೀಕರ್ ಅಂತಹವರೊಬ್ಬರಿದ್ದಿದ್ದರೆ ಮಾತ್ರ ಈ ಘಟನೆಯ ಗುಟ್ಟು ಇತ್ಯರ್ಥವಾಗುತ್ತಿತ್ತು" ಅಂದರು ಮಲ್ಹಾರಿರಾಯರು.


" ಅದಿರಲಿ ರಾಯರೇ—ನಾರ್ಲೀಕರ್ ಬೆಂಗಳೂರಿಗೆ ಬಂದಿದ್ದಾಗ ಆ ಕೋಟುಗಳ ನ್ಯಾಕರೀ ಅವರಿಗೆ ತೋರಿಸಬಾರದಿತ್ತು ? " ಓಂಪುಡಿ ಕೇಳಿದರು.

ಮಲ್ಹಾರಿರಾಯರು ತಲೆ ಕೆರೆದುಕೊಂಡು ಹೇಳಿದರು.

"ನೋಡಿ-ಆ ಕೋಟುಗಳು ನನ್ನ ಭಾವನ ಸೋದರಳಿಯ ಅಥವಾ ಅವರ ಸಹ-ರೂಮಿಗ ಅಂತ ಹೇಳಲೇ ?–ಅವರಿಬ್ಬರದೂ ಅಲ್ಲ, ಈ ದೇಶದಲ್ಲಿ ಕಣ್ಣೆದುರಿಗ ನಡೆಯೋ ಆಶ್ಚರ್ಯಗಳನ್ನು ವಿಮರ್ಶೆ ಮಾಡೋಕೆ–ಸರಿಯಾದ ವಿಜ್ಞಾನಿಗಳಿರೊಲ್ಲ. ಇಂಗ್ಲೆಂಡು, ಅಥವಾ ಅಲ್ಪಸ್ವಲ್ಪ ವಿಜ್ಞಾನಿ ಅನ್ನಿಸಿಕೊಂಡೋನಿಗೆ ನಮ್ಮ ದೇಶದಲ್ಲಿ ಯಾವ ವಿಚಿತ್ರ ಘಟನೆಯೂ ಕಣ್ಣಿಗೆ ಬೀಳೊಲ್ಲ. ಇಂಗ್ಲೆಂಡು, ಅಮೆರಿಕಾಕ್ಕೇ ಹೋಗ ಬೇಕು! ಮುಖ್ಯ–ಆ ಕೋಟುಗಳು ಹಾಸನದ ಆ ಇಬ್ಬರ ಶುಂಠರ ಬೆನ್ನೇರಿ ವ್ಯರ್ಥ ವಾಗಬೇಕಾಯ್ತು–ಅಷ್ಟೆ!"

ಮಲ್ಹಾರಿರಾಯರ ಮಾತು ಸಮಯೋಚಿತವಾಗಿತ್ತು.

—ಶೇಷ



ಪತ್ರಿಕಾ ಸಂಪಾದಕ :—

ಘಟಾನುಘಾಟಿಗರೆಲ್ಲ ನಮ್ಮೂರಲ್ಲಿ ಸೇರಿದ್ದರಲ್ಲಪ್ಪ! ಅವರ ಭಾಷಣ ಅಚ್ಚು ಹಾಕೋ ಹೊತ್ತಿಗೆ ಸುಸ್ತಾಗಿಬಿಟ್ಟೆ!!

ಸಂತೋಷಕ್ಕೆ ಕಾರಣ....!

" ನಮಸ್ಕಾರ ರಾಯರೇ "

" ನಮಸ್ಕಾರ...ನಮಸ್ಕಾರ...ಪೇಟೆ ಕಡೆ ತಾನೆ ಹೋಗೋದು. "

ಹೌದು. ತುಂಬಾ ಸಂತೋಷದಿಂದ ಇದ್ದೀರಿ ? ಕಾರಣ ಏನೋ ?"

" ನಿಜ ಸ್ವಾಮಿ, ನಿಜ. ಇವತ್ತು ತುಂಬಾ ಸಂತೋಷಕಣ್ರಿ. "

" ನಿಮ್ಮನ್ನು ನೋಡಿದ ಕೂಡಲೇ ತಿಳಿಯಿತುಬಿಡಿ. ಒಂದು ವಾರದಿಂದ ನೋಡ್ತಾ ಇದ್ದೇನೆ, ಯಾವಾಗಲೂ ಸಪ್ಪೆಮುಖ ಹಾಕ್ಕೊಂಡು ದಾರಿಯಲ್ಲಿ ಹೋಗು ವುದನ್ನು, ನಮಸ್ಕಾರ ಎಂದು ನಿಮ್ಮ ಪಕ್ಕದಿಂದ ಹೋಗುವಾಗ ಹೇಳಿದರೂ ನೀವು ನಿಮ್ಮ ಚಿಂತೆಯಲ್ಲೇ ಇರ್ತಾ ಇದ್ರಿ. ಆಫೀಸಿನಲ್ಲಿ ಏನಾದರೂ ಪ್ರಮೋಷನ್ ದೊರೆಯಿತೆ ಅಥವಾ ಇಂಕ್ರಿಮೆಂಟ್ ಆಯಿತೆ ?"

" ಛೆ.. ಛೆ.. ಆಫೀಸ್ ವಿಷಯವಲ್ಲ. ಬಿಡಿ, ಸರಿಯಾಗಿ ಕೆಲಸ ಮಾಡಿದರೆ ಪ್ರಮೋಷನ್ ಸಿಕ್ಕೆಸಿಗುತ್ತೆ. ಎಲ್ಲರಿಗೂ ಸಿಗುವಂತೆ ವರ್ಷ ವರ್ಷ ಇಂಕ್ರಿಮೆಂಟ್ ಸಿಗುತ್ತೆ. ಅದಕ್ಕೆಲ್ಲ ಸಂತೋಷ ಪಡಬೇಕೆ ?"

" ಮನೆಯವರನ್ನೇನಾದರೂ ತವರಿಗೆ ಕಳಿಸಿರುವಿರಾ ?"

" ಏನು ಮಾತು ಸ್ವಾಮಿ ! ಮೊನ್ನೆತಾನೆ ಹತ್ತನೆಯದನ್ನು ನಾಮಕರಣ ಮಾಡಿ ಕರೆದುಕೊಂಡು ಬಂದೆ. ಒಂದು ಪಕ್ಷ ಕಳಿಸಿದ್ದರೂ ಒಂದು ಹೊಟ್ಟೆ ಹೆಚ್ಚಾಗುತ್ತೆ ಅಂತ ದುಃಖಪಡಬೇಕು."

" ಎಲ್ಲಾದರೂ...ಗುಪ್ತ ಧನ ಸಿಕ್ತೆ !?"

ಗುಪ್ತ ಧನ ! ನಮಗೆಲ್ಲ ದೊರೆಯುತ್ತೇನ್ರೀ. ಆಕಸ್ಮಾತ್ತಾಗಿ ಸಿಕ್ಕಿದರೂ ಹಣೆಯಲ್ಲಿ ಬರೆದಂತೆ ಸಿಕ್ಕಿದೆ ಎನ್ನಬಹುದು. ಇಷ್ಟಕ್ಕೆಲ್ಲ ಸಂತೋಷಪಡಬೇಕೇನ್ರಿ ?

" ಯಾವುದಾದರೂ ಲಾಟ್ರಿ ನಿಮ್ಮ ಹೆಸರಿಗೆ ಬಂತೆ ?"

" ಐದು ರೂಪಾಯಿ ತೆತ್ತು ಚೀಟಿ ಕೊಂಡಿದ್ದೇವೆ. ಅಂದಮೇಲೆ ಲಾಟ್ರಿ ನಮ್ಮ ಹೆಸರಿಗೆ ಬಂದರೆ ಆಶ್ಚರ್ಯಪಡಬೇಕೆ ? ನನಗೆ ಲಾಟ್ರಿ ಚೀಟಿ ಕೊಳ್ಳುವ ಅಭ್ಯಾಸ ಇಲ್ಲಸ್ವಾಮಿ"

" ಮತ್ತೆ ಅಕ್ಕಿ 'ಪರಮಿಟ್' ಏನಾದ್ರು ದೊರೆಯಿತೆ ? "

" ಇಲ್ಲ ಬಿಡಿ. ರೇಷನ್ ಕಾರ್ಡಿನಲ್ಲಿ ಬರೆದಷ್ಟು ಕೊಟ್ಟರೆ ಸಾಕು. ಸೊಸೈಟಿಯಂವರೇನಾದರೂ ಸ್ವಲ್ಪ ಹೆಚ್ಚಿಗೆ ಕೊಟ್ಟಿರುವರೆಂದರೆ ನಮ್ಮಿಂದ ಏನೋ ಅವರ ಕೆಲಸ ಆಗಬೇಕಾಗಿರುತ್ತೆ. ಅದಕ್ಕೆ ಹೆಚ್ಚಿಗೆ ಹಾಕಿದ್ದಾರೆಂದು ತಿಳಿಯಬೇಕು ಆ ವಿಷಯಕ್ಕೆಲ್ಲ ಸಂತೋಷಪಡಬೇಕೆ ?

" ದೊಡ್ಡವಳಿಗೇನಾದರೂ ವರ ನೋಡಿರುವಿರಾ ?"

" ವರ...... ! ಛಿ ..ಛೆ .. ! ಹಾಗೇನಾದರೂ ಆದರೆ ನಾಳೆ ಮುಂಜಾನೆ ಸಾವಿರಾರು ರೂಪಾಯಿ ವರದಕ್ಷಿಣೆ ಕೊಡಬೇಕು ಸ್ವಾಮಿ, ಸದ್ಯಕ್ಕೆ ವರಗಳ ವಿಷಯವಲ್ಲ ಬಿಡಿ. "

" ಹಾಗಾದ್ರೆ...ನಿಮ್ಮ ಸಂತೋಷದ ಕಾರಣ ತಿಳಿಯಲಿಲ್ಲವಲ್ಲ ರಾಯರೆ ! ?"

" ಓ...ಹೋ...ಬನ್ನಿ...ಬನ್ನಿ...ಓನ್ ಬೈಟೂ ಕಾಫಿ ಕುಡೀತಾ ಮಾತನಾಡೋಣ, "

ಇಬ್ಬರು ಜನತಾ ಲಾಡ್ಜ್ ಎದುರುಗಡೆಯ ಸುಂದರ್ ಕೇಫೆ ಹೊಕ್ಕರು.

" ಕಾಫಿ ಬೇರೆ ಕುಡಿಸ್ತಾ ಇದ್ದೀರಿ, ಏನೋ ಘನವಾದ ಕಾರ್ಯ ಸಾಧಿಸಿರಬೇಕು."

" ನೀವು ಹೇಳಿದ ಮಾತು ನೂರಕ್ಕೆ ನೂರು ಸತ್ಯ. ನೋಡಿ ಒಂದು ವಾರದಿಂದ ಆಫೀಸಿಗೆ ರಜ ಹಾಕಿ ಮಕ್ಕಳನ್ನು ಹಿಡಿದುಕೊಂಡು ಶಾಲೆಗೆ ತಿರುಗಿದ್ದೇ ತಿರುಗಿದ್ದು. ಅಡ್ಮಿಷನ್‌ಗಾಗಿ, ನಿನ್ನೆ ತಾನೆ ಅಡ್‌ಮಿಟ್ ಮಾಡಿಕೊಂಡರು. ಅದಕ್ಕೆ ಸ್ವಾಮಿ ಇಷ್ಟು ಸಂತೋಷ."

" ಪುಣ್ಯವಂತರು ರಾಯರೆ ನೀವು. ನಾನು ತಿಂಗಳಿಂದ ತಿರುಗುತ್ತಿದ್ದೇನೆ ಇನ್ನೂ ನಮ್ಮ ಮಕ್ಕಳ ಅಡ್‌ಮಿಷನ್ ಆಗಿಲ್ಲ. ಈಗ 10 ಗಂಟೆಗೆ ಹೋಗಬೇಕು ಶಾಲೆಗೆ ಕ್ಯೂನಲ್ಲಿ ನಿಲ್ಲಲು. "

" ಸ್ವಾಮಿ ನನ್ನ ಮಾತು ಕೇಳ್ತೀರಾ. ದಾರಿಯಲ್ಲಿ ಬರ್‍ತಾ ರಾಯರ ಗುಡಿಗೆ ಹೋಗಿ ನಮ್ಮ ಮಕ್ಕಳಿಗೆ ಶಾಲೆಯಲ್ಲಿ ಅಡ್ಮಿಷನ್ ಆದರೆ ಐದು ಬ್ರಾಹ್ಮಣರಿಗೆ ಊಟಕ್ಕೆ ಹಾಕ್ತೇನೆ, ನಿನಗೆ ಹಾಲಿನ ಅಭಿಷೇಕ ಮಾಡಿಸ್ತೀನಿ. ಎಂದು ಬೇಡಿಕೊಂಡು ಬನ್ನಿ. ತಪ್ಪದೇ ಅಡ್‌ಮಿಷನ್ ಆಗುತ್ತೆ. ಮರಿಯಬೇಡಿ, ರಾಯರಗುಡಿ...ಹಾ."

—ಕುಮಾರಿ ಕೃಷ್ಣ

ಎನ್ ಎನ್ ಕೆ

★

ಸ್ವಾಮಿ,

ನಾನೊಬ್ಬ ರಾಷ್ಟ್ರಪ್ರೇಮಿ. ಭಾರತದ ಯಾವ ಮೂಲೆಯಾದರೂ ವಿಭಜನೆ ಯಾಗುವುದೇ ಆಗಲಿ ಇಲ್ಲಾ ನಮ್ಮ ಸರ್ಕಾರಕ್ಕೆ ವಿರುದ್ಧ ಯಾರಾದರು ಎದುರಾಗಿ ನಿಲ್ಲಲಿ ನನ್ನ ಹೃದಯದೊಳಗೆ ಕಠಾರಿ ಅನ್ನುತ್ತಾರಲ್ಲಾ ಅದನ್ನ ಇರಿದ ಹಾಗೆ ಆಗುತ್ತೆ. ಭಾರತದ ಐಕ್ಯತೆಯ ದೃಷ್ಟಿಯಿಂದ ನಾನು ಅನೇಕಬಾರಿ ಊಟಮಾಡಿದ ಮೇಲೆ ಐದಾರು ಘಂಟೆಗಳಕಾಲ ಅನಿರ್ದಿಷ್ಟ ಏಕಾದಶಿ ಮಾಡಿದ್ದೀನಿ. ಇದನ್ನು ನೀವು ಪೇಪರುಗಳಲ್ಲಿ ಓದಿ ತಿಳಿದ ವಿಷಯವೇ ಆಗಿದೆ. ದೇಶಕ್ಕಾಗಿ ನಾನು ನನ್ನ ತನು ಮನವನ್ನೇ ಅರ್ಪಣ ಮಾಡಿದೀನಿ ಅಂತ ತಮಗೆ ಒತ್ತಿ ಹೇಳಬೇಕಾಗಿಲ್ಲ. ಹೀಗಿರುವಾಗ್ಗೆ ಮೂರು ತಿಂಗಳಿಂದ ನನ್ನ ಮನಸ್ಸನ್ನೇ ಅಲ್ಲೋಲ ಕಲ್ಲೋಲ ಮಾಡಿ ನನಗೆ ಭಯ ಬೇಸರ ಇತ್ಯಾದಿಗಳನ್ನು ಒಬ್ಬ ತಂದಿರಿಸಿದ್ದಾನೆ ಅವನೇ ಆಮುರ್ಗಂ.

ಈ ಆಮುರ್ಗಂ ನನಗೆ ಹೇಗೆ ಸ್ನೇಹಿತನಾದ ಅಂತ ನಿಮಗೆ ಇನ್ನ್ಯಾವಗಲಾದರೂ ಬರೆಯುತ್ತೀನಿ, ಸಧ್ಯಕ್ಕೆ ಅವನ ಸಹವಾಸ ಸಾಕಾಗಿ ಹೋಗಿದೆ ಅಂತ ಹೇಳ ಬಲ್ಲೆ. ವಿಷಯ ಇಷ್ಟೆ. ಬೊಂಬಾಯಿನಲ್ಲಿ ಮಾತುಂಗ ಅಂತ ಒಂದು ಬಡಾವಣೆಯಿದೆ. ಅಲ್ಲಿ ಸಾಮಾನ್ಯವಾಗಿ ಇರುವ ಜನರೆಲ್ಲಾ ದಕ್ಷಿಣ ದೇಶದವರೇ. ಮದ್ರಾಸಿ ಹೋಟಲು ಗಳು ಅಂಗಡಿಗಳಂತೂ ಹೇರಳವಾಗಿವೆ. ಸಾಯಂಕಾಲದ ಹೊತ್ತು ಮದ್ರಾಸಿನ ಮೂರ್ ಮಾರ್ಕೆಟ್ ಹತ್ತಿರ ಇದ್ದಾಗೆ ಇರುತ್ತೆ. ಇಂತಹ ಹೋಮ್ಲಿ ಅಟ್ಮಾಸ್ಫಿಯರ್‌ಗೆ ಆಮುರ್ಗಂ ಹತ್ತು ವರ್ಷಗಳಹಿಂದೆ ಕೊಯಮತ್ತೂರಿನಿಂದ ವಲಸೆ ಬಂದ. ಈಗ ಅವನು ಭದ್ರವಾಗಿ ಬೇರೂರಿದ್ದಾನೆ ಅಷ್ಟೇ ಅಲ್ಲ ತಕರಾರು ಶುರುಮಾಡಿದಾನೆ.

ಬಂದ ಸ್ವಲ್ಪ ದಿನದಮೇಲೆ ಮಾತುಂಗ ಪೂರ್ತಿ ಕಣ್ಣುಹಾಯಿಸಿ ಆಮುರ್ಗಂ ಯೋಚನೆ ಮಾಡಹತ್ತಿದ ಯಾವಾಗಲಾದರೂ ಈ ಮಾತುಂಗಾ ಮದ್ರಾಸ್ ಸ್ಟೇಟಿಗೆ ಸೇರಿತ್ತೆ ಹಾಗಿದ್ದಮೇಲೆ ಮಹಾರಾಷ್ಟ್ರದವರು ಮದ್ರಾಸಿನ ಕಣ್ಣಿಗೆ ಮಣ್ಣೆರಚಿ ಚಾರಿತ್ರಿಕವಾಗಿಯೂ ಸಂಸ್ಕೃತಿ ನಡೆನುಡಿ ಇತ್ಯಾದಿಗಳ ದೃಷ್ಟಿಯಿಂದಲೂ ಮದ್ರಾಸಿಗೆ ಕಾನೂನು ಪ್ರಕಾರ ಸೇರಬೇಕಾಗಿದ್ದ ಈ ಮಾತುಂಗನ್ನ ಕಸಿದುಕೊಂಡಿದ್ದಾರೆಯೆ ? ಹೀಗೆ ಯೋಚಿಸಿ ಯೋಚಿಸಿ ಕೊನೆಗೆ ಮೂರು ತಿಂಗಳಹಿಂದೆ ಮಾತುಂಗ ಮದ್ರಾಸಿಗೇ ಸೇರಿದ್ದು ಎಂಬ ಧೃಢ ನಿರ್ಧಾರಕ್ಕೆ ಬಂದ. ಆಗಲೇ ನನ್ನ ಹೃದಯಕ್ಕೆ ಶೂಲೆ ಇರಿದ ಹಾಗೆ ಆಯಿತು ಅನ್ನಬಹುದು.

ಅವತ್ತು ಒಂದು ಹೋಟಲಿನಲ್ಲಿ ಸಿಕ್ಕಿದಾಗ ನನಗೆ ಅವನು ತಾನು ಮಾಡಿದ ನಿರ್ಧಾರವನ್ನು ತಿಳಿಸಿದ. ತಾನು ಬದುಕಿರೋವರ್ಗ್ಗ ಹೆಣಗಾಡಿದರೂ ಸರಿ ಈ ಮಾತುಂಗವನ್ನು ಮಹಾರಾಷ್ಟ್ರದಿಂದ ಕಿತ್ತುಕೊಂಡು ಮದ್ರಾಸಿಗೆ ವಾಪಸ್ಸು ಮಾಡೋದು ತನ್ನ ಧ್ಯೇಯ ಅಂತಾ ಹೇಳಿಕೊಂಡು ಇದಕ್ಕೇನಾದರೂ ಮದ್ರಾಸ್ ಒಪ್ಪದಿದ್ದರೆ ಮಾತುಂಗವನ್ನೇ ಬೇರೆ ಒಂದು ಸ್ಟೇಟನ್ನಾಗಿ ಮಾಡಿ ಅದಕ್ಕೆ ಮುಖ್ಯ ಮಂತ್ರೀನೂ ಆಗ್ತೀನಿ ಅಂತ ಅಲ್ಲೇ ನನ್ನೆದುರಿಗೇ ಭಾಷೆಹಾಕಿದ.

"ಆಮರ್ಗಂ ! ಆಮರ್ಗಂ !! ದಯವಿಟ್ಟು ಬ್ಯಾಡಪ್ಪಾ. ನಮ್ಮ ದೇಶಾನಾ ಹೀಗೇನೇ ಬೇರೆ ಬೇರೆ ಮಾಡಿ ಚೂರು ಚೂರು ಮಾಡ್ಬೇಡಾಪ್ಪಾ" ಅಂತ ಎಷ್ಟೆಷ್ಟೋ ಕೇಳಿಕೊಂಡೆ. ಆಮರ್ಗಂ ಕೇಳಲೇ ಇಲ್ಲ.

ಅವತ್ತಿನ ದಿವಸಾನೇ ನಾನಂ ಪ್ರತಿಭಟನಾ ಪೂರ್ವಕವಾಗಿ ನನ್ನ ಲೇಟೆಸ್ಟ್ Indefinite fast ಶುರುಮಾಡಿದ್ದು. ಆಮೇಲೆ ಎಷ್ಟು ಹೊತ್ತಾದ್ರೂ ಆಮರ್ಗಂ ಜಗ್ಗಲೇ ಇಲ್ಲಾ ನನಗೂ ಹಸಿವಾಯ್ತು ಅದಕ್ಕೆ ಉಪ್ವಾಸ ನಿಲ್ಲಿಸ್ಬುಟ್ಟೆ. ಆಮೇಲೆ ಸ್ವಲ್ಪ ದಿವಸ ಆಮರ್ಗಂ ನನ್ನ ಕಣ್ಣಿಗೆ ಬೀಳಲಿಲ್ಲ. ಮೊನ್ನೆ ರಿಪಬ್ಲಿಕ್ ಡೇ ದಿವಸ ನನ್ನ ಹುಡುಕಿಕೊಂಡು ಬಂದು ಕೈಗೆ ಸಿಹಿ ತಿಂಡಿ ಇಟ್ಟ. ಅದನ್ನ ಮುಂಚೆ ತಿಂದು ಆಮೇಲೆ "ಯಾತಕ್ಕಿದು ?" ಅಂತ ಕೇಳಿದೆ. "ಇಪ್ಪೋ ಎಟ್ಟು ಮಣಿಕಿ M.M.K. ಸ್ಟಾರ್ಟ್ ಪಣ್ರೆ ಅದಕ್ಕದಾ ಇದಿ" ಅಂತ ಅಂದ. "M.M.K." ಅಂದ್ರೆ ಏನಯ್ಯಾ ಅಂತ ಕೇಳಿದೆ. "ಮಾತುಂಗ ಮುನ್ನೇತ್ರ ಕಜಗಂ" ಅಂದ.

ಈ ಸಲ ಶೂಲೆಯ ಜೊತೆಗೆ ಬಂದೂಕ್ನೂ ನನ್ನ ಹಾರ್ಟಿನಲ್ಲಿಟ್ಟು ಹೊಡೆದ ಹಾಗಾಯಿತು. "ನಾನು ಇದನ್ನ ಪೂರ್ಣವಾಗಿ ವಿರೋಧಿಸ್ತೀನಿ ಆಮರ್ಗಂ. ಈಗಲೇ ಉಪ್ವಾಸ ಮಾಡ್ತೀನಿ" ಅಂತ ಹೊರಟೆ. ಆದರೆ ಅವತ್ತು ನಮ್ಮ ಮೆಸ್‌ನಲ್ಲಿ ಸ್ಪೆಶಲ್ ರಿಪಬ್ಲಿಕ್ ಡೇ ಲಂಚ್ ಇದ್ದದ್ದರಿಂದ ಉಪ್ವಾಸನ ಪೋಸ್ಟ್‌ಪೋನ್ ಮಾಡಿದೆ.

ಅವತ್ತಿನಿಂದಲೇ ಆಮರ್ಗಂ M. M. K. ಉದ್ಧಾರಕ್ಕೆ ಟೊಂಕಕಟ್ಟಿನಿಂತ ತನ್ನ ಸ್ಟ್ಯಾಂಡರ್ಟ್‌ನವರೇ ಆದ ಅನೇಕ ಮಂದಿಯನ್ನ ಫುಟ್‌ಪಾತ್ ಮೇಲೆ ಹೋಟ ಲಿನಲ್ಲಿ ಟ್ರೈನ್‌ನಲ್ಲಿ ಇತ್ಯಾದಿ ಕಡೆಗಳೆಲ್ಲಾ ಹುಡುಕಿ M.M.K ಗುಂಪಿಗೆ ಭಾರಿ ಬೆಂಬಲ ತಂದುಕೊಂಡ. ಹೊಸ ಮೆಂಬರುಗಳಿಗೆಲ್ಲಾ M.M K. ಗುರ್ತಿರುವ ನೆಟ್ ಬನಿಯನ್‌ಗಳನ್ನ ತೆಗೆದುಕೊಟ್ಟ. ಒಂದು ತಿಂಗಳಲ್ಲಿ ಕಂಡವರ ಬಾಯಿಯಲ್ಲಿ M.M.K. M.M.K. ಅಂತ ಕೇಳುವುದಕ್ಕೆ ಶುರುವಾಯಿತು. ಒಬ್ಬ ಬೊಂಬಾಯಿ ಸಿನಿಮಾ ನಿರ್ಮಾತರೂ M.M.K.ಗೆ ಸಾವಿರ ರೂಪಾಯಿ ಕೊಟ್ಟು ಮೆಂಬರ್ ಆಗಿದ್ದಾರೆ ಅಂತ ಬೇರೆ ವದಂತಿ.

ಮೊನ್ನೆ ಜನಕ್ಕೆಲ್ಲಾ ಭಿತ್ತಿಪತ್ರಿಕೆಯನ್ನ ಆಮರ್ಗಂ ಹಂಚುತ್ತಿದ್ದದ್ದನ್ನ ನೋಡಿದೆ. ಅದರಲ್ಲಿ ಬಿಡುಗಡೆಯಾದ ಮಾತುಂಗದಲ್ಲಿ ಮಕ್ಕಳಿಗೆ ಹನ್ನೆರಡು ವರ್ಷದ

ಪ್ರೈಮರಿ ಸ್ಕೂಲು ಸರ್ಕಾರಿ ನೌಕರರಿಗೆ ವರ್ಷಕ್ಕೆರಡು ಉಚಿತವಾಗಿ ದಟ್ಟಿಪಂಚೆ ಮದ್ರಾಸಿಗೂ ಮಾತುಂಗಕ್ಕೂ ನಾಲ್ಕು ಎಕ್ಸ್‌ಪ್ರೆಸ್ ಒಂದು ಪ್ಯಾಸಂಜರ್ ಟ್ರೈನು ವಾರಕ್ಕೆ ನಾಲ್ಕು ದಿನಾ ಆದರೂ ಹೋಟೆಲುಗಳಲ್ಲಿ ಕಡ್ಡಾಯವಾಗಿ ಹಪ್ಪಳ ತಯಾರಿ ಸುವದಕ್ಕೆ ಒಂದು ಲಾ ಮುಂತಾದ ಅನೇಕ ಸುಧಾರಣೆಗಳನ್ನು ಒತ್ತಿ ಹೇಳಿದ್ದಾನೆ. ಅವನ ಮತ್ತು ಅವನ ಕಜಗಂನ ಪ್ರಗತಿಯನ್ನ ನಾನು ಬಹಳ ವ್ಯಸನದಿಂದ ನೋಡು ತ್ತಿದ್ದೇನೆ. ಹೀಗೇ ಅವನನ್ನ ಬಿಟ್ಟರೆ ಇನ್ನು ಸ್ವಲ್ಪ ದಿನದಲ್ಲಿ ಅವನ ಪ್ರತಿಮೆ ಯೊಂದನ್ನು ಅವನ ಬೆಂಬಲಿಗರು ಮಾತುಂಗದ ಕಿಂಗ್ ಸರ್ಕಲ್‌ನಲ್ಲಿ ನೆಡುವುದರಲ್ಲಿ ಯಾವ ಸಂಶಯವೂ ಇಲ್ಲ.

ಈಚೀಚೆಗೆ ಆರ್ಮುಗಂ ನಾಗಾಲ್ಯಾಂಡ್ ಪಾಕಿಸ್ತಾನ ಕೆಂಪು ಚೀನಾ ಮುಂತಾದ ಕಡೆಗಳಿಗೆ ಪತ್ರವ್ಯವಹಾರ ಬೆಳೆಸುತ್ತಿದ್ದಾನೆ ಮೊನ್ನೆಯ ದಿವಸ ಒಬ್ಬ ರಷ್ಯದ ಕಮ್ಯೂನಿಸ್ಟಿನ ಕಾಗದ ನೋಡಿದೆ. ರಷ್ಯನ್ ಸ್ಟಾಂಪು ಬಹಳ ಚೆನ್ನಾಗಿತ್ತು. ಕೊಡು ಅಂತ ಕೇಳಿದೆ. ಆರ್ಮುಗಂ "ಕುಡುಕುರ್ದಿಲ್ಲೆ ಪೋಡಾ" ಅಂತ ಅಂದ. ಈ ಮೇಲ್ಕಂಡ ಕಾರಣಗಳಿಂದ ನನಗೆ ರೋಸಿ ಹೋಗಿದೆ. ದೇಶಕ್ಕೆ ಕಳಂಕವಾದ M M.K. ಯನ್ನೂ ನನಗೆ ರಷ್ಯಾದ ಸ್ಟಾಂಪು ಕೊಡಲು ನಿರಾಕರಿಸಿದ ಆರ್ಮುಗಂನನ್ನೂ ಅಧೋಗತಿಗೆ ಇಳಿಸಿ ಸಂತೋಷ ಪಡಿಯಬೇಕು ಅಂತ ನಿರ್ಧಾರಮಾಡಿದ್ದೇನೆ.

ಇದಕ್ಕೆ ತಮಗೆ ತಿಳಿದಿರುವ ಹಾಗೆ ಹಣ ಅಗತ್ಯ M M.K. ಗೆ ವಿರುದ್ಧ ನಾನು ಅನೇಕ ಭಿತ್ತಿ ಪತ್ರಿಕೆಗಳನ್ನ ಓಡಾಡಿಸಬೇಕಾಗಿದೆ. ಓದುತಿಳಿದವರಿಗೆ M.M.K. ಯ ಪ್ರಗತಿ ದೇಶಕ್ಕೆ ಎಷ್ಟು ಹಾನಿ ಎಂದು ಮನದಟ್ಟು ಮಾಡಲು ಅನೇಕ ಪುಸ್ತಕ ಗಳನ್ನ ಬರೆಯಬೇಕಾಗುತ್ತೆ. ದಿನಕ್ಕೆ ಐದಾರುಸಲ ಭಾಷಣ ಬಿಗಿಯಬೇಕಾಗಿದೆ, ಈ ಮಧ್ಯೆ ನನಗೆ ಕಾಫಿ ತಿಂಡಿ ನಶ್ಯ ಇತ್ಯಾದಿಗಳು ಅತ್ಯವಶ್ಯಕ ಅಂತ ಓದಿದವರಾದ ತಮಗೆ ನಾನು ಪ್ರತ್ಯೇಕವಾಗಿ ತಿಳಿಸಬೇಕಿಲ್ಲ.

ಅದರಿಂದಾಗಿ ಮೇಲ್ಕಂಡ ವಿಷಯವನ್ನು ಓದಿ ನೀವು ಮತ್ತು ನಿಮ್ಮ ಓದುಗರು ತಮ್ಮ ಕೈಲಾದಷ್ಟು ಹಣವನ್ನ ಕೆಳಕಂಡ ಅಡ್ರೆಸ್ಸಿಗೆ ದೇಶೋದ್ಧಾರಕ ದೃಷ್ಟಿಯಿಂದ ಈಗಲೇ ಕಳುಹಿಸುತ್ತೀರೆಂದು ನಂಬಿದ್ದೇನೆ. ಈ M.M.K. ಹೀಗೆಯೇ ಬೆಳೆದು T.T.K. C.B.I. M.P.C.C. L.B J. ಗಳ ಹಾಗೆ ಪ್ರಸಿದ್ಧಿ ಆಗದಿರಲಿ ಎಂದೇ ನನ್ನ ಧ್ಯೇಯ. ಇಂತಿ ನಿಮ್ಮವನೇ ಆದ,

ಪುಟ್ಟಸ್ವಾಮಿ

ಕೇಳಿದ ವರ ಕೊಡುವ

★

ನಮ್ಮ ದೇವರು ಹಾಗೆಯೇ ! ಕೇಳಿದ ವರ ಕೊಡ್ತಾನೆ. ಅನುಮಾನವೇ ಇಲ್ಲ. ಪ್ರಸನ್ನ ನಿಮಗೆ ಗೊತ್ತಲ್ಲಾ ! ಒಂದೊಂದು ಪರೀಕ್ಷೇಲೂ ಫಸ್ಟ್ ರ್‍ಯಾಂಕ್ ಗಿಟ್ಟಿಸುತ್ತ ಬಂದ ಹುಡುಗ. ಪರೀಕ್ಷೆಗೆ ಇಟ್ಟ ಪುಸ್ತಕಗಳು ಹಾಗಿರಲಿ, ಇದಕ್ಕೆ ಸಂಬಂಧಪಟ್ಟಿದ್ದು ಅಂತ ಲೈಬ್ರೆರಿಯಲ್ಲಿ ಯಾವ ಯಾವ ಪುಸ್ತಕಗಳಿವೆಯೋ ಅವೆಲ್ಲವನ್ನೂ ಓದಿ ಅರ್ಥ ಮಾಡಿಕೊಂಡ ಪ್ರಚಂಡ. ದೇವರು ಅವನ ಬೆನ್ನು ತಟ್ಟಿದ "ಮಗನೇ" ಅಂದ. ಪುಸ್ತಕ ಅಂದರೆ ಅಷ್ಟು ಇಷ್ಟಾನೇಪ್ಪ ನಿನಗೆ, ಅದೇ ವರ ಕೊಡ್ತೀನಿ, ಇರು" ಎಂದ. ಫಲಿತಾಂಶ. ಪ್ರತಿಯೊಂದು ಪರಿಕ್ಷೇಲೂ ಫಸ್ಟ್ ಫಸ್ಟ್ ಆಗಿ ಮೂರು ಚಿನ್ನದ ಪದಕ ಗಿಟ್ಟಿಸಿದ. ಪ್ರಸನ್ನ ಇವತ್ತು "ಡಾಕ್ಟರ್ ಪ್ರಸನ್ನ ಡಿ. ಎಸ್. ಸಿ., ಲೈಬ್ರೇರಿಯನ್ ಕಾಲೇಜ್ ಲೈಬ್ರೆರಿ" ಆಗಿದ್ದಾನೆ. ಪುಸ್ತಕಗಳನ್ನು ತಿರಿವಿ ಹಾಕೋದೇ ಕೆಲಸ.

ಅಮೃತರಾಜ್ ನಿಮಗೆ ಗೊತ್ತಿದೆಯೋ ಇಲ್ಲವೋ ಕಾಣೆ. ಮೊನ್ನೆ ಮೊನ್ನೆ ಸಿನಿಮಾ ತಾರೇನ ಏರೋಪ್ಲೇನಿನಲ್ಲಿ ಹಾರಿಸಿಕೊಂಡು ಹೋಗಿ ಮದುವೆಯಾದ. ಅಂತ ಪೇಪರುಗಳಲ್ಲಿ ಬಂದಿರಲಿಲ್ಲವೇ ? ಅವನೂ ಪ್ರಸನ್ನನ ಜತೆ ಓದಿದವನೇ, ಅವನ ಜತೆಗೆ ಪ್ಯಾಸು ಮಾಡಿದವನೇ. ಆದರೆ ಅವನು ಕಾಲೇಜಿನಲ್ಲಿರೋತನಕ ಒಂದು ಪುಸ್ತಕ ಓದಲಿಲ್ಲ. ಬರೀ "ನೋಟ್ಸು"ಗಳನ್ನೇ ಬಾಯಿಪಾಠ ಮಾಡಿ ಮಾಡಿ, ಪರೀಕ್ಷೇಲಿ ಪ್ಯಾಸಾಗುತ್ತಿದ್ದ. "ನೋಟ್ಸು"ಗಳಿಂದಲೇ ಪದವೀಧರ ಆದ. ಆಗ ನಮ್ಮ ದೇವರು ಅವನ ಬೆನ್ನನ್ನು ತಟ್ಟಿದ. "ಮಗನೇ ! ನೀ ಪ್ಯಾಸಾದೆ ಅಲ್ಲವೆ ? ನನಗೆ ತುಂಬಾ ಸಂತೋಷಾಪ್ಪ. ನೋಟ್ಸು ಅಂದರೆ ನಿನಗೆ ತುಂಬಾ ಮೆಚ್ಚಿಗೆ ಅಲ್ಲವೆ ? ಅದನ್ನೇ ಕೊಡ್ತೀನಿ. ತೊಗೋ ವರ" ಅಂದ. ಅವತ್ತಿಂದ ನೋಡಿ ಅಮೃತರಾಜ್ ಕೈಲಿ ಬರೀ ಕರೆನ್ಸಿ ನೋಟ್ಸೇ ಓಡಾಡುತ್ತಿವೆ. ಒಂದು ಹಿಡಿ ಮಣ್ಣು ಹಿಡೀತಾನೆ ಅವನು. ಹಿಡಿ ಬಿಡಿಸೋ ಹೊತ್ತಿಗೆ ಅಲ್ಲಿ ಕರೆನ್ಸಿ ನೋಟುಗಳಿರುತ್ತೆ. ಏನ್ರಿ ಢೋಂಗಿ ಬಿಡ್ತೀರಿ ಅಂತ ನನ್ನ ಅನ್ನಬೇಡಿ. ಮೊದಲೆಲ್ಲಾ ಅಂತಾ ಇತ್ತಿಲ್ಲವೇ. "ಅವನು ಅದೃಷ್ಟವಂತ ಕಣಯ್ಯ ! ಮಣ್ಣು ಹಿಡಿದರೆ ಅದು ಅವನ ಕೈಲಿ ಹೊನ್ನಾಗುತ್ತೆ" ಅಂತ. ಈಗ ಹೊನ್ನಾಗುವ ಸಂಭವ ಕಡಿಮೆ. ಅದರ ಬದಲು ಕರೆನ್ಸಿ ನೋಟ್ಸ್ ಆಗುತ್ತೆ ಅನ್ನಬಾರದೇ ? ಆ ನೋಟ್ಸು ಕೂಡ ಅವನ ಕೈಲಿ,—ನವಿಲುಗರಿ ಪುಸ್ತಕದಲ್ಲಿಟ್ಟರೆ ಮರಿ ಹಾಕುತ್ತೆ ಅಂತ ಮಕ್ಕಳು ಹೇಳುಲ್ಲವೇ,—ಹಾಗೆ ಮರಿ ಹಾಕುತ್ವೆ. ಧೃತರಾಷ್ಟ್ರನ ತರಹ ನೂರು ನೂರು ಮರಿಹಾಕುತ್ವೆ.

ರಾಮಕೃಷ್ಣ ನಿಮಗೆ ಗೊತ್ತಿರಲೇಬೇಕು. ಬುಕ್ ಡಿಪೋಗಳಲ್ಲಿ ಒಂದು ಕಾಲು ಮನೇಲಿ ಒಂದು ಕಾಲು ಅವನಿಗೆ ಅನ್ನಬಹುದು. ಓದಿ ಐ. ಎ. ಎಸ್. ಮಾಡಿ ದೊಡ್ಡ ಗೌಡ ಆಗಿದ್ದಾನಲ್ಲ ದಿಳ್ಳೀಲಿ. ಅವನೂ ಪ್ರಸನ್ನನ ಜತೆಗೆ, ಅಮೃತರಾಜು ವಿನ ಜತೆಗೆ ಓದಿ ಪ್ಯಾಸು ಮಾಡಿದವನೇ ! ಅವನಿಗೆ ಪುಸ್ತಕ ಅಂದರೆ ಇಷ್ಟ. ಆದರೆ ಇಷ್ಟೆಲ್ಲಾ ಪುಸ್ತಕ ಓದಿ ಮುಗಿಸುಕ್ಕೆ, ಅನೂ ಪರೀಕ್ಷೆ ಹೊತ್ತಿಗೆ ಅಂದರೆ ಅಸಾಧ್ಯ ಅಂತ ಗೊತ್ತು. ಅದಕ್ಕೇ ಅವ ನೋಟ್ಸು ಓದಿ ಬಹದೂರ್ ಪ್ಯಾಸ್ ಮಾಡಿದ. ಆಮೇಲೆ ಐ. ಎ. ಎಸ್. ಮಾಡಿದ. ಕೈತುಂಬ ನೋಟ್ಸು, ಆದರೆ ಆಫೀಸಿನಲ್ಲಿ ಏನು ಮಾಡ್ತಾನೆ ಅಂತ. ಬಂದ ಕರೆನ್ಸಿ ನೋಟ್ಸ್‌ನೆಲ್ಲಾ ಪುಸ್ತಕದ ಡಿಪೋಗೆ ಹೋಗಿ ಆರಿಸಿ ತರ್‍ತಾನೆ, ಅದನ್ನೆಲ್ಲಾ ಆಫೀಸಿಗೆ ತೆಗೆದುಕೊಂಡು ಹೋಗಿ ಆರಾಮವಾಗಿ ಅಲ್ಲಿ ಓದುತ್ತಾನೆ. ಹೀಗೆಕಾಯಿತು ಅಂತ ? ಅವನು ಪ್ಯಾಸು ಮಾಡಿದಾಗಲೂ ನಮ್ಮ ದೇವರು, ಈಪ್ಸಿತಾರ್ಥದಾಯಕ ಬೆನ್ನು ತಟ್ಟಿ ಮಗನೇ ! ನೋಟ್ಸು ಓದಿ ಪ್ಯಾಸ್ ಮಾಡಿದೆ. ಅದಕ್ಕೆ ಕೈತುಂಬಾ ಕರೆನ್ಸಿ ನೋಟುಗಳಿರಲಿ, ಪುಸ್ತಕ ಕಂಡರೂ ತುಂಬಾ ಮೆಚ್ಚು ನಿನಗೆ ಅದಕ್ಕೇ ಆ ಕರೆನ್ಸಿ ನೋಟ್ಸು ಖರ್ಚುಮಾಡಿ. ಪುಸ್ತಕ ಓದೋ ಹಾಗೆ ನಿನ್ನ ಬಾಳು ನಡೀಲಿ" ಅಂತ ವರ ಕೊಟ್ಟ. ಅದಕ್ಕೆ ಅವ ಹಾಗಾದ.

ಕೇಳಿದ ವರ ಕೊಡುವ, ದಿಟ. ನಮ್ಮ ದೇವರು.

ಆಯುರ್ವೇದದ ಔಷಧಿಯೊಂದರಲ್ಲಿ ಚಿನ್ನ, ಬೆಳ್ಳಿ, ಹವಳ, ಮುತ್ತು ಮತ್ತು ಶಿಲಾಜಿತ್ ಬೆರೆಸಿರುತ್ತಾರಂತೆ.

—ಇದನ್ನು ಸೇವಿಸುವಾಗ ಖಾಲಿ ಹಣದ ಚೀಲ ಇರಬಾರದಂತೆ.

* * * *

ನಮ್ಮತ್ತೆ ಏನನ್ನಾದರೂ ಮುಕ್ತಾ ಇರ್ತಾರೆ—ಸೊಸೆಯರನ್ನು ಕಂಡರೆ ಇಷ್ಟ.

—ಇದನ್ನು ಬೇರೆ ತರಹ ವಿನಯವಾಗಿ ಹೇಳಬಹುದಿತ್ತು.

* * * *

ಲೆಕ್ಕದ ಪರೀಕ್ಷಕರು ಮನೆಯಲ್ಲಿ ಉತ್ತರ ಪತ್ರಿಕೆಗಳಿಗೆಲ್ಲಾ ನಂಬರು ಹಾಕಿ ಮುಗಿಸಿದ ಮೇಲೆ, ಹೊಸ ಭಾವಿಯೊಂದನ್ನು ತೋಡಿಸಿದರು.

—ಅಪಾರ್ಥಬರದ ಹಾಗೆ ಹೇಳಬಹುದಿತ್ತು.

* * * *

ಗಾಂಪರೊಡನೆ ಪತ್ರಿಕೋದ್ಯೋಗಿ

ಮಠದಲ್ಲಿ ವಿದ್ಯುತ್ ಸಂಚಾರವಾಯಿತೆ ? ಇದೇನು ಈ ಸಂಭ್ರಮ ಈ ಓಡಾಟ ಈ ಮಂಕ ಮಡೆಯರು ಈ ಪಾಟಿ ಉತ್ಸಾಹದಿಂದ ಓಡಾಡುತ್ತಿದ್ದಾರಲ್ಲಾ ಎಂದು ಆಶ್ಚರ್ಯದಿಂದಲೇ ಮಠ ಹೊಕ್ಕೆ.

" ಬರಬೇಕು ಬರಬೇಕು "—ಎಂದು ಮಡೆಯ ಕರೆದ.

' ಸ್ವಾಮಿ ಯತಿಗಳನ್ನ ಪಾದಪೂಜೆಗೆ ಕರಿಯಲಿಕ್ಕೆ ಬಂದಿರಾ ? ಚಾತುರ್ಮಾಸಕ್ಕೆ ಕೂಡುವವರಿದ್ದಾರೆ. ಈಗ ಅವರಿಗೆ ಪುರುಸೊತ್ತಿಲ್ಲ."

—ಎಂದು ಮರುಳ ಗೌರವ ಪಾರುಪತ್ತೆಗಾರನಂತೆ ಎಗರಲಾಡಿದ.

" ಅಯ್ಯಾ ಮರುಳೇ. ಏನೋ ಗಾಂಪ ಓಡಾಟಾಂದ್ರೆ ಮಠದಲ್ಲಿ ದೇವರೂ ಟಾಂತ ಅಂದ ಹಾಗೆ ಬಹಳ ಸಂಭ್ರಮದಿಂದ ಹಾರಾಡ್ತಾ ಇದ್ದೀರಲ್ಲಾ. ನಾನು ಪೇಪರಿನವ..."

—ಎಂದು ವಿಚಾರಿಸಿದೆ. ಆಗ ಆ ಮರುಳ " ಸ್ವಾಮೀ ಕೊಂಚ ಈ ಈಚಲ ಚಾಪೆ ಮೇಲೆ ಕೂಡಿ ಗುರುಗಳು ಬರ್‍ತಾರೆ. ಅವರನ್ನೇ ಕೇಳಿ...ನಾವು ಮಠದ ವಿಷಯ ಬಾಯಿ ಬಿಡುವಂತಿಲ್ಲ. ಪತ್ರಿಕೋದ್ಯಮಿಗಳಿಗೆ ಸುದ್ದಿ ತಿಳಿಸಬೇಕಾದರೆ ಅವರೇ ಬರಬೇಕು."

—ಎಂದು ರಾಜ್ಯದ ಮುಖ್ಯಮಂತ್ರಿಗಳೇ ಪತ್ರಿಕಾ ಪ್ರತಿನಿಧಿಗಳಿಗೆ ಉತ್ತರಿಸಬೇಕೂನ್ನೊ ನಿಯಮ ಪಾಲಿಸುವ ಪೋಲಿಟೀಷಿಯನ್ನಿನಂತೆಯೇ ಹೇಳಿದ್ದ ಮರುಳ.

ನಾನು ಈಚಲ ಚಾಪೆ ಮೇಲೆ ಕೂತೆ. ಖಟ್ ಖಡಲ್ ಎಂದು ಗಂಭೀರ ಗಜಗಮನದಿಂದ ಗುರುಗಳು ಬಂದಾಗ ಪಾದುಕೆಗಳು ಸದ್ದು ಮಾಡಿದ್ದವು.

ಅವರ ಬರುವಿಕೆ ನೋಡಿ, ಒಂದು ಕ್ಷಣ ಡಂಗುಬಡಿದು ಕೂತೆ. " ನೋಡಿ ಗುರುಗಳ ಆಗಮನದ ಮೇಲೆ ಒಂದು ಪದ್ಯ ನನ್ನ ಸ್ನೇಹಿತ ಚಿಲ್ರೆ ಭಾವಿ ಕವಿ ಬರ್‍ದಿದಾನೆ. ಇದನ್ನೂ ನಿಮ್ಮ ಪೇಪರಿನಲ್ಲಿ ಪ್ರಕಟಿಸಿ "—ಎಂದು ಹೇಳಿ ಒಂದು ಕಾಗದ ನನ್ನ ಕೈಗೆ ಕೊಟ್ಟ ಮಂಕ, ಅದನ್ನು ನಾನು ನೋಡಿದೆ......

ಬಂದನವ ನೋಡಿರೈ ಗುರುಗಾಂಪ ।
ಗಾಂಪತನವನೆ ತೇದು ಮೈಗೆ ಲೇಪಿಸಿದಂತೆ ॥

ತಂಪುಗಾಳಿಗೆ ನಲಿವ ಗಾರ್ಧಬದಂತೆ ।

ಬಂದನ್ಯೆ ಗುರುವರ್ಯ ಮಂಕಂಭೂಪ...॥

ಇತ್ಯಾದಿ ಮಂಕನೇ ಈ ಕವಿತೆ ರಚಿಸಿರಬಹುದೆ? ಎಂಬ ಅನುಮಾನ ಬರುವಂತಹ ಪದ್ಯ ನನ್ನಿಂದ ಓದಿಸಿದ್ದ. ಗುರುಗಳು ಬಂದು ವೇದಿಕಯು ಮುಂದೆ ನಿಂತರು. ಪೀಠದ ಹಿಂದೆ ನಿಂತಿದ್ದ ಮಡೆಯು ಕೈಲಿದ್ದ ಬೀಸಣಿಕೆಯಿಂದ ಧೂಳು ಕೊಡವಿದ.

"ಕೃಷ್ಣಾಜಿನವೆಲ್ಲಿ ಅದನ್ನೂ ಮಠದ ಹೆಗ್ಗಣಗಳು ತಿಂದುಹಾಕಿದವೇನು?"

—ಎಂದು ಪೀಠದ ಶೃಂಗಾರದ ಜವಾಬ್ದಾರಿ ಹೊತ್ತ ಮರುಳನ ಕಡೆ ಕೆಂಗಣ್ಣು ಬೀರಿದರು.

"ಯತಿಗಳು ಕುಪಿತರಾಗಬಾರದು. ಅದು ತೀರ ಹರಿದು ತುಂಡಾಗಿದ್ದರಿಂದ ತೇಪೆ ಹಾಕಿಸಲು ಮೋಚಿ ಅಂಗಡಿಗೆ ಕಳಿಸಿದ್ದೇನೆ..."

—ಎಂದು ಹೇಳಿದ ಮರುಳ ಸರಸರನೆ ಹೊದ್ದ ಕಾವಿ ಅಂಗವಸ್ತ್ರವನ್ನು ಚಟಾರ್ ಎಂದು ಕೊಡವಿ ಮಡಿಸಿ ಗುರುಪೀಠವನ್ನು ಅಲಂಕಾರಮಾಡಿದ.

ಗುರುಗಾಂಪರು ಪೀಠವನ್ನಲಂಕರಿಸಿದರು, ಮಂಗಳ ವಾದ್ಯಗಳು ಮೊಳಗಿದುವೋ ಎಂಬಂತ ರಾತ್ರಿ ಸೊಳ್ಳೆ ಕಾಟದಿಂದ ನಿದ್ರೆಯಿಲ್ಲದ ಮಡೆಯು ಘನವಾಗಿ ಆಕಳಿಸಿದ. ಅದಕ್ಕೆ ಶೃತಿಗೂಡಿಸಿದಂತೆ. ತೀರ್ಥಕ್ಕಿಂತ ಪ್ರಸಾದದ ಆಸೆಗೆ ಬಂದ ಅಜ್ಜಮ್ಮನ ಎಂಟನೆಯು ಮತ್ತು ಏಳನೆಯು ಮಕ್ಕಳು ಹಸಿವಿನಿಂದ ಗಟ್ಟಿಯಾಗಿ ಅಳತೊಡಗಿದವು. ಗುರುಗಳು ಚಕ್ಕಮಕ್ಕ ಹಾಕಿ ಕೂತು—

ಮುಟ್ಠಾಳಾ ಆ ಮಕ್ಕಳಿಗೆ ಮೊದಲು ಪ್ರಸಾದ ಹಂಚು...ಅವೇ ದೇವರು..." ಎಂದು ಅಜ್ಞಾಪಿಸಿದರು.

"ನೈವಿದ್ಯ ಇನ್ನೂ ಆಗಿಲ್ಲ ಗುರುವೆ"

"ನಯವಾದ ವಿದ್ಯೆಯೋ ನೇವಿದ್ಯ ಕಣೋ ಮಗೂ ನಮ್ಮ ಬಡ ಗಾಂಪ ಸಂಸ್ಥಾನ ಪ್ರಸಾದ ಕಡಲೆ ಗುಗ್ಗರಿ ಅದನ್ನು ತಿನ್ನೋಕೆ ಕೂತಿರೋ ಬಡ ಮುತ್ತೈದೆ ಮಕ್ಕಳು ಇದಕ್ಕಿಂತ ಸಪಾತ್ರರು ಬೇಕೆ? ಇವರೇ ನಮ್ಮ ರಾಜ್ಯದ ನಿಜವಾದ ಪ್ರಜೆಗಳು. ಈ ಬಡವರಿಗಾಗೇ ನಮ್ಮನ್ನಾಳುವ ಮಂದಿ ಅನೇಕ ಪಂಚವಾರ್ಷಿಕ ಯೋಜನೆ ಮಾಡಿದ್ದಾರೆ. ಪಾಪ ಅದೇನು ತೊಂದರೆಯೋ ಅಥವ ಎಲ್ಲಿ ಎಡವಿದ್ದಾರೆಯೋ ಅಂತ ನಮ್ಮ ದಿ॥ ಪ್ರಧಾನಿ ಪಂಡಿತ್‌ಜಿ ಅವರೇ ಹೇಳಿದಂತೆ ಈ ಯೋಜನೆಗಳ ಒಟ್ಟು ಫಲಿತಾಂಶ ಶ್ರೀಮಂತ ಹೆಚ್ಚು ಶ್ರೀಮಂತನಾಗಿದ್ದಾನೆ—ಬಡವ ಬಡವನಾಗಿದ್ದಾನೆ. ಎರಡು ವರ್ಗಗಳು ತಂತಮ್ಮ ಅಂತಸ್ತಿನಲ್ಲಿ ಹೆಚ್ಚನ್ನೇ ಸಾಧಿಸಿದಂತೆ ಆಗಿದೆಯಲ್ಲಾ!..."

" ಅರ್ಥವಾಗಲಿಲ್ಲ ಗುರುವೆ..."

" ಶ್ರೀಮಂತರೂ ಹೆಚ್ಚು ಶ್ರೀಮಂತರಾದರು—ಬಡವರು ಹೆಚ್ಚು ಬಡವರಾದರು...ಎರಡರಲ್ಲೂ " ಹೆಚ್ಚು " ಆಗಿರುವುದನ್ನು ಕಾಣಿರಾ ! "

—ಗುರು ಶಿಷ್ಯರ ಈ ಮಾತು ಕೇಳಿ ಗಾಂಪರೊಡೆಯರು ಆಡಿದ ಮಾತಲ್ಲಿ ಎಂತಹ ಗೂಢವಾದ ಅರ್ಥವಿದೆ ಎಂಬುದನ್ನು ಕಂಡು ಭೇಷ್ ಎನ್ನುತ್ತಾ ಅವರ ಅಭಿಪ್ರಾಯ ನನ್ನ ಶೀಘ್ರಲಿಪಿಯಲ್ಲಿ ಬರೆದುಕೊಂಡೆ. ಹಾಗೆ ಬರೆಯುತ್ತಿದ್ದಾಗಲೇ ಗುರುಗಳು ನನ್ನನ್ನು ನೋಡಿದ್ದು.

" ಈ ಭಕ್ತ ಯಾರು ಮಂಕಾ ? "

" ಗುರುಗಳೇ ಇವರು ಪತ್ರಿಕಾಪ್ರತಿನಿಧಿಗಳು...ತಮ್ಮನ್ನು ಸಂದರ್ಶಿಸಿ ಕೆಲವು ಪ್ರಶ್ನೆಗಳನ್ನು ಹಾಕಿ ತಮ್ಮ ಘನವಾದ ಅಭಿಪ್ರಾಯ ತಿಳಿಯಲು ಬಂದಿದ್ದಾರೆ...ಈ ವಿಷಯ ಆಗಲೇ ತಮಗೆ ಪತ್ರ ಬರೆದಿದ್ದರು...ಬಾ ಅಂತಲೂ ತಿಳಿಸಿದ್ದೆವು "

" ಓ...ಇದ್ದೀತು...ಈಚೆಗೆ ನಮಗೆ ಹಸಿವು ಹೆಚ್ಚಿದ್ದರಿಂದ ಮರವು ಬಂದಡರಿದೆ..."

" ಕ್ಷಮಿಸಬೇಕು ಗುರುಗಳು...ವಯಸ್ಸು ಹೆಚ್ಚಿದರೆ ಮರವು ಬರುವುದು ಸಹಜ...ಹಸಿವಿಗೂ ಮರವಿಗೂ ನೀವು ಗಂಟು ಹಾಕುತ್ತಿರುವುದು ಅರ್ಥವಾಗಲಿಲ್ಲ..."

" ಹಸಿವು ಅಂತ ಅರಿದಾಗ ಹೊಟ್ಟೆ ಹಸಿವೊಂತಲೇ ನೀವು ಈ ದುರ್ಭಿಕ್ಷದ ಕಾಲದಲ್ಲಿ ತಿಳಿಯುವುದು ಸಹಜ...ಹಸಿವು ಎಂತಹ ಹಸಿವು ಗೊತ್ತೇ ಪತ್ರಿಕೋದ್ಯೋಗಿಗಳೇ ? "

" ತಿಳಿವಿನ ಹಸಿವು—ಅರಿವಿನ ಹಸಿವು ಅಂತ ಊಹಿಸಲೇ ?"

" ನಿಜ...ತಿಳಿದ ಸಂಸ್ಕೃತ ಪಂಡಿತರು. ಜ್ಞಾನಪಿಪಾಸೆ ಅಂತ ಅನ್ನೋಲ್ವೇ... ಅದರ ಹಸಿವು ಅನ್ನೋಕೆ ನನಗೆ ಅಧಿಕಾರ ಇಲ್ಲ...ಹೇಳಿ ಕೇಳಿ ಗಾಂಪರ ಮರ ಅಂದ ಮೇಲೆ ಅಂತಹ ಬುದ್ಧಿಯ ಚಿಂತನೆ ನಾವು ಹೇಗೆ ಮಾಡಬೇಕು ?..."

" ...ಈ ಸ್ವತಂತ್ರ ಭಾರತದಲ್ಲಿ ನೀವು ಹ್ಯಾಗೆ ಬೇಕಾದರೂ ಚಿಂತನ ಮಾಡುವ ಅಧಿಕಾರ ನಮ್ಮ ಕಾನ್ಸಿಟ್ಯೂಷನ್ನು ಕೊಟ್ಟಿದೆಯಲ್ಲಾ..."

" ಅದೇ ಆ ಕಾನ್ಸಿಟಿಟ್ಯೂಷನ್ನಿದೇ ಈಗ ಬಂದಿರೋದು ನೋಡಿ. ನಮ್ಮ ಶಿಷ್ಯರುಗಳು ಸಮತೂಕದ ಆಹಾರವಿಲ್ಲದೆ ಹ್ಯಾಗೆ ಬಡವಾಗಿದ್ದಾರೆ ನೋಡಿ...ನಮ್ಮ ಮಠವೇ ನನ್ನ ಪಾಲಿನ ಸ್ವತಂತ್ರ ಭಾರತ ನೋಡಿ...

" ಅಂದರೇ...ನೀವು..."

" ನಾವು ಭಾರತೀಯರು ಮೊದಲಿಂದಲೂ ನಮ್ಮ ಆರ್ಯಧರ್ಮದಂತೆ "ಯಥಾ ರಾಜಾ ತಥಾ ಪ್ರಜಾ" ಅಂತ ರಾಜ ಹೇಗೋ ಹಾಗೆ ಅಂತಲೇ ನಡಕೊಂಡು ಬಂದಿರೋದು ತಾನೆ "

" ಈಗ ರಾಜರೇ ಇಲ್ಲವಲ್ಲ ಗುರುಗಳೇ "

" ರಾಜರಿಲ್ಲ ಪಾಳೈಗಾರ್ರಿದ್ದಾರೆ ಅಷ್ಟೆ...ರಾಜರುಗಳಿದ್ದಾಗ ಮಂತ್ರಿಗಳೂ ಅವರ ಪರಿವಾರವೂ ಅದಕ್ಕೆ ಹಿಂದೆ ದಳವಾಯಿಗಳೂ ಅವರ ಪರಿವಾರವೂ ಅವರವರ ಬಂಧುಬಳಗಕ್ಕೆ ಅವರವರ ಷೋಕಿಯಂತೆ ಮುಂದೆ ತಂದರು...."

" ಅಂದರೆ ನಾವೀಗ ಹಿಂದುಳಿಯದಂತೆ ಮುಂದುವರಿಸಲು ನಾನೇ ಆಯ್ದು ತಂದು ಆಗ್ರಪೀಠದಲ್ಲಿ ಕೂಡಿಸಿರುವವರು ಭಾಷಣದಲ್ಲಿ ಎಲ್ಲವೂ ಚೆನ್ನ ಅಂತಲೇ ಹೇಳುತ್ತಾರಲ್ಲಾ..."

" ಉಪದೇಶ—ಭಾಷಣ—ಪುರಾಣ—ಬದನೆಕಾಯಿ—ಇವು ಒಂದಕ್ಕೊಂದು ದಾಯಾಧಿಗಳು ಸಂಬಂಧಿಗಳು...ಆಯ್ತು ನೀವು ಯಾವ ಪಾಪರಿನವರು ? "

" ಅಲ್ಲ ಸ್ವಾಮಿ ನಾವು ಪೇಪರಿನವರು "

" ಓಹೋ—ಶ್ರೀಮಂತರೂನ್ನಿ..."

" ಅಲ್ಲ ಬಡ ಪತ್ರಿಕೋದ್ಯೋಗಿ "

" ಮತ್ತೇ ಶ್ರೀಮಂತರ ಪತ್ರಿಕೇಲಿ ಯಾಕೆ ಇದ್ದೀರಿ ? "

" ಹೊಟ್ಟೆಗಿಲ್ಲದ್ದಕ್ಕೆ..."

" ಹಾಗೆ—ಈ ರಾಜಕೀಯ. ಅವರುಗಳು ಕಡೆಯ ಅಸ್ತ್ರವಾಗಿ ಈ ರಂಗಕ್ಕಿಳಿದರೆ ಅವರ ಟೋಪಿ ಆಟಾಟೋಪಿ ಕೂತದ್ದು ನಿಂತದ್ದು ಮೊಸಳೆ ಅತ್ತಂತೆ ಎನ್. ಜಿ, ಓ. ಗಳನ್ನು ನೋಡಿ ಅತ್ತದ್ದು ಅದರ ಹಿಂದೆ ಚಿಂಪಾಜಿಯಂತೆ ನಕ್ಕಿದ್ದು ವಿವಿಧ ಭಂಗಿಯಲ್ಲಿ ಪೇಪರ ತುಂಬಾ ಪ್ರಕಟಿಸಿ ಅವರುಗಳ ಕೆಮ್ಮೊ ಘನ ಸಂಗೀತ ಅವರುಗಳು ಆಕಳಿಸಿದ್ದೇ ದೇಶದಲ್ಲಿ ನಡೆದ ದೊಡ್ಡ ಘಟನೆಂತ ಬರೀತೀರಲ್ಲಾ ಇಂತಹ ಆತ್ಮದ್ರೋಹ ಮಾಡ್ಕೊಳ್ಳೊದಕ್ಕೇ ನಿಮಗೆ ಹೊಟ್ಟೆಗಿಲ್ಲ..."

"ಏನ್ಮಾಡೋಮ ಗುರುಗಳೇ ನಾನೆ ಪತ್ರಿಕೆ ನಡೆಸೋಕೆ " ದಂ " ಇಲ್ಲ. " ದಂ " ಇರೋರ ಕಹಳೆ ಊದದಿದ್ರೆ ನಮಗೆ ಹೊಟ್ಟೆಗಿಲ್ಲ..."

" ಮಾಡಿ ಮಾಡಿ ಪಾಪ "

" ಗುರುಗಳೇ ನಿಮ್ಮ ಮಠಕ್ಕೂ ಹೊಗಳುಭಟ್ಟರಿಲ್ಲವೇ ?"

" ಇದ್ದಾರೆ ಉಗುಳುಭಟರು; ದೇಶಾದ್ಯಂತ ಗಾಂಪರನ್ನು ಹಾಗೇ ಇಡದಿದ್ದರೆ ತಮಗೆಲ್ಲ ಓಟು ಬರುವುದಿಲ್ಲವೋ. ಎಂಬ ಶಹಣೆ ತನದಿಂದ " ಧಡ್ಡಾ ನನಗೇ ಓಟು

ಕೊಡು" ಎಂದು ಹೇಳಿ ಹೇಳಿ ಆಡಳಿತ ನಡಿಸೋ ಅವರೇ ನಮ್ಮ ಉಗುಳುಭಟರು ಕಾಣಯ್ಯ—"

"ಗುರುಗಳೇ ಆತ್ಮ ಪರಮಾತ್ಮ ಚಿಂತನೆಯ ನೀವು ಈ ರಾಜಕೀಯಕ್ಕಿಳಿಯ ಬಾರದು"

"ಯಾವ ಗುರು ಇಳಿದಿಲ್ಲ! ಹಳೇದುರ್ಗದ ಮದಕರಿನಾಯಕನ ಕಾಟಕ್ಕೆ ಮುರುಘ ಮಠದವರು ರಾಜಕೀಯಕ್ಕೆ ಇಳಿಯಲಿಲ್ಲವೆ? ಮತ್ತೆ ಈಗಿರುವವರೆಲ್ಲಾ ಗಾಂಧಿ ಮಠದವರಲ್ಲವೆ? ಆತ್ಮ ಪರಮಾತ್ಮ ವಿಷಯ ಪಾಮರ ಭಕ್ತರಿಗೆ ಕೇವಲ ಭೋಳೀ ಭಕ್ತರಿಗೆ ಉಪದೇಶ."

"ಇದು ತಪ್ಪಲ್ಲವೆ?"

"ಗಾಂಪ ಮಠದವರು ಮಾಡಿದರೆ ತಪ್ಪು" ಬೇರೆ ಶ್ರೀಮಂತ ಮಠ ಮಾಡುವು ದೆಲ್ಲಾ ಲೋಕಕಲ್ಯಾಣಕ್ಕೆ..."

"ಈಗ ನಿಮ್ಮ ಸಂದೇಶವೇನು ಗುರುಗಳೇ?"

"ಸಬಕೇ ಸನ್ಮತಿ ಧೇ ಭಗವಾನ್"

"ಕಡೆಯ ಪ್ರಶ್ನೆ ಗುರುಗಳೇ"

ಊರಿಂಗೆ ದಾರಿಯನು। ಆರು ತೋರಿದಡೇನು।
ಸಾರಾಯದಾ ನಿಜವ ತೋರುವ ಗುರುವುತಾ।
ನಾರಾದಡೇನು ಸರ್ವಜ್ಞ॥

ಈ ಪದ್ಯವನ್ನು ಬರೆದಾಗ ಸರ್ವಜ್ಞ ಮುಂಬರುವ ನಮ್ಮ ಈ ಸಾರಾಯಿ ನಿಷೇಧದ ಕಾಲ ಬರುವುದೆಂದು ತಿಳಿದೇ ಬರೆದಿರಬಹುದೆ?"

"ನಿಸ್ಸಂದೇಹವಾಗಿ—"ಸಾರಾಯ" ಅಂದರೆ ಸತ್ವ-ಮೋಕ್ಷ ಅಂತ ಅರ್ಥ ಗೊತ್ತಿಲ್ಲದಿದ್ದರೆ–ನಮಗೆ ಸಾರಾಯಿಯೇ ಗತಿ ಕಣಾ ಹೇ ಗುಂಡೋಪಂತ ಪತ್ರಿಕೋ ದ್ಯಮಿ!—ಸಾರಾಯ ಅಧಿಕಾರ ಸಾರಾಯ..."

"ಗುಂಡೋಪಂತ!! ಹಾಗಂದ್ರೆ"

"ಗುಂಡು ಹಾಕುವವರ ಪಂಥದವರು ಗುಂಡೋಪಂತರು"

"ಕರೆಕ್ಟ್ ಗುರುಗಳೇ—ಅದೇ ನಮಗೆ ಸ್ಫೂರ್ತಿಯ ಔಷಧಿ ಗುರುಗಳೇ— ಹೊತ್ತಾಯ್ತು ಅದಕ್ಕೆ ಬರ್ಲೆ?"

"ಶುಭಮಸ್ತು—ಮಂಕಾ ಇನ್ನೊಂದ್ಸಲ ಇವನ್ನ ಮಠದ ಮೆಟ್ಲು ಹತ್ತಿಸಬ್ಯಾಡ.

ದಾಶರಥಿದೀಕ್ಷಿತ್

ಸರ್ವಜ್ಞ ಪದ

ಪ್ರಿಯ ಸಂಪಾದಕರೇ :—

ಕೆಳಕಂಡ ಸರ್ವಜ್ಞ ಪದಗಳನ್ನು ಓದಿದಾಗ ಅವುಗಳನ್ನು ಮೆಲುಕು ಹಾಕಿ ಹಾಗೇ ಅವುಗಳ ಮೂಲ ಅರ್ಥ ನೀಡಿದಾಗ ಇವು ಕಾಲಾತೀತ ಎಂದೆನಿಸುತ್ತೆ. ಕಾಲ ಕಾಲಕ್ಕೆ ಇವುಗಳನ್ನು ನೆನೆಯುವುದು ಒಳ್ಳೆಯದು.

ಹೇಡಿಂಗೆ ಹಿರಿತನವು । ಮೂಢಂಗೆ ಗುರುತನವು
ನಾಡ ನೀಚಂಗೆ ದೊರೆತನವು ದೊರೆತಿಹರೆ
ನಾಡೆಲ್ಲ ಕೆಡುಗು ಸರ್ವಜ್ಞ ॥

* * * *

ಅರಸ ರಕ್ಕಸನಂತೆ । ನರಮಂತ್ರಿ ಹುಲಿಯಂತೆ ।
ಬರೆವಾತ ನಾಡನರಿಯಂತೆ । ಪರಿವಾರ
ಗರಗಸದಂತೆ ಸರ್ವಜ್ಞ ॥

* * * *

ಎದ್ದು ಮಾತಾಡದಿರು । ಎದ್ದೆದ್ದು ನಿಲ್ಲದಿರು ।
ಇದ್ದ ಮಾಸಿಸರ ಜರಿಯದಿರು ಓಲಗದೊ ।
ಳಿದ್ದಾಗ ನೀನು ಸರ್ವಜ್ಞ ॥

* * * *

ಸರ್ವಜ್ಞನ ರಾಜನೀತಿ ಪದ್ಯಗಳು ಬಹು ರಂಜಕ ಅಲ್ಲವೆ ? ಎಂದು ಇವುಗಳ ಲ್ಲಿನ ರಾಜರು ಈಗಿನ ರಾಜಕೀಯದಲ್ಲಿ ಮುಂದಾಳಾಗಿ ಬಂದು ರಾಜ್ಯವಾಳುವವರೇ ಅಲ್ಲವೆ ?

ಪರಿವಾರ ಗರಗಸದಂತೆ ದೇಶವನ್ನು ಕೊಯ್ದು ಹಾಕುತ್ತಿದೆ.

ಇತಿ,

—ಸಂಪಾಪತಿ.

ಅಕ್ಕಿ ಕಾಳು ಹಾಕುಲ್ಲವೇನ್ರೋ!

ಜಾಂಬವಂತಾಚಾರ್ಯರಿಗೆ ಕುಟುಕುಜೀವ ಆಡುತ್ತಿತ್ತು. ಆಗ ತಾನೇ ನಾಡಿ ಹಿಡಿದು ನೋಡಿದ ಪಂಡಿತರು "೯೮ ಆಯಿತು. ತುಂಬಾ ಅಶಕ್ತಿಯಿಂದಿದ್ದಾರೆ. ಮಕ್ಕಳೆಲ್ಲ ಹತ್ತಿರ ಇದ್ದರೆ ಚಲೋದು" ಎಂದು ಹೇಳಿ ಹೋಗಿದ್ದರು. ಮನೆಯವರೆಲ್ಲರೂ ಹಾಸಿಗೆಯ ಸುತ್ತ ಗಿರಕಾಯಿಸಿಕೊಂಡಿದ್ದರು.

ತೇಲುಗಣ್ಣು ಬೀಳುಗಣ್ಣು ಮಾಡುತ್ತ ಆಚಾರ್ಯರು ದೃಷ್ಟಿಯನ್ನು ಸುತ್ತ ಹಾಯಿಸಿದರು. ಬಾಗಿಲಬಳಿ ನಿಂತಿದ್ದ ಅತ್ತೆಮ್ಮನವರನ್ನು ಕಂಡರು. ಕಾಲಬಳಿ ಕುಳಿತಿದ್ದ ಹೆಂಡತಿಯನ್ನು ಕಂಡರು. ಹಾಗೇ ಕಣ್ಣು ಹಾಯಿಸಿದರು. ಮೊದಲ ಮಗ ವೆಂಕಣ್ಣ ನಿಂತಿದ್ದ. ಎರಡನೆಯವ ಬಿಂದುಮಾಧವ ಅಲ್ಲೇ ಇದ್ದ. ಮೂರನೆಯವ ಸೇತುರಾಮನೂ ನಿಂತಿದ್ದ. ನಾಲ್ಕನೆಯ ಗೋದೂಬಾಯಿ ಅಲ್ಲೇ ಕಂಡಳು. ಐದನೆಯವ ನರಸಿಂಹ ಕುಳಿತಿದ್ದ. ಆರು, ಏಳು, ಎಂಟು ಕಣ್ಣಿಗೆ ಬಿದ್ದುವು. "ನಾಣಿ" ಎಲ್ಲಿ ಅಂದರು. ತಲೆದೆಸೆಯಿಂದ "ಇಲ್ಲೇ ಇದೀನಪ್ಪ" ಎಂಬ ಉತ್ತರ ಕೇಳಿಸಿತು. "ಶೀನಿ" ಎಲ್ಲಿ ಎಂದು ಕಿರುದನಿಯಲ್ಲಿ ಆಚಾರ್ಯರು ಕೇಳಿದರು. "ಏನು ಬೇಕಪ್ಪಾ" ಅಂದ ಶೀನಿ ತಲೆಯ ಕಡೆಯಿಂದ. "ಮರಿ ಎಲ್ಲಿ", ಅಂದರು ಆಚಾರ್ಯರು. ದನಿ ತುಂಬಾ ಕುಗ್ಗಿಹೋಗಿತ್ತು. "ಕಾಲು ಹಿಸಕ್ತಾ ಇದೀನಪ್ಪ, ಪಂಡಿತರು ಹೇಳಿದ್ದರು ಕಾಲುಜ್ಜಿ ಅಂತ" ಅಂದ ಮರಿ. ಕಡೆಯವ, ಹನ್ನೊಂದನೆಯ ನಂಬರ.

ಆಚಾರ್ಯರು ತಮ್ಮ ಮನೋಶಕ್ತಿಯಿಂದ ಸ್ವಲ್ಪ ಚೇತರಿಸಿಕೊಂಡರು. "ಅಲ್ರೋ! ಮನೆ ಮಂದಿ ಮಕ್ಕಳೆಲ್ಲಾ ನನ್ನ ಸುತ್ತ ಗಿರಕಾಯಿಸಿಕೊಂಡು ನೊಣ ಹೊಡೀತಿದ್ದರೆ, ರೇಷನ್ ಅಂಗಡೀಗೆ ಹೋಗಿ ಅಕ್ಕಿ ತರೋರ್ಯಾರೋ? ನಿನ್ನೆಯಿಂದಲೇ ಮನೇಲಿ ಒಂದು ಕಾಳು ಕೂಡ ಅಕ್ಕಿ ಇಲ್ಲವಲ್ರೋ! ಸತ್ತರೆ ನನ್ನ ಬಾಯಿಗೆ ಅಕ್ಕಿಕಾಳು ಕೂಡ ಹಾಕುಲ್ಲವೇನ್ರೋ! ಯಾರಾದರೂ ಬೇಗ ಹೋಗಿ ಆಕ್ಕಿ ತನ್ನಿ. ಅಲ್ಲಿನ ತನಕ ಜೀವ ಹಿಡಕೊಂಡು ಇರ್ತೀನಿ" ಅಂತ ಸ್ಪಷ್ಟವಾಗಿ ಎಲ್ಲರೂ ಕೇಳಿಸುವಂತೆ ಒದರಿದರು.



For 3 way Beauty Treatment....
RAJA
SNOW
AMLA HAIR OIL KASTURI SOAP
MANYAM & CO. BANGALORE MADRAS MADURAI BOMBAY.

Reg. No. B.G. 343 KORAVANJI August 1965

Printed by B. S. Iyengar, Bangalore-2

Publisher—B N. Gupta Editor—M. Shivaram